ಕೊರವಂಜಿ

★

KURAVANJI
Kannada Monthly



ಸಂಪಾದಕರು:
ಶ್ರೀ ರಾ. ಶಿ.

ಬರಹಗಾರರು:
ಶ್ರೀ ರಾಮು
ಶ್ರೀ ದಾಶರಥಿದೀಕ್ಷಿತ್
ಶ್ರೀ ಎಲ್ಕೆನ್
ಶ್ರೀ ಅ. ರಾ. ಸೆ.

ಇತ್ಯಾದಿ, ಇತ್ಯಾದಿ

ಫೆಬ್ರವರಿ
೧೯೬೪

೨೫ ನ. ಪೈ.

ಳನಗೆಯ ಮಾಸಪತ್ರಿಕೆ



ಮಹಾಶಿವರಾತ್ರಿಯಂದು
ಕರ್ನಾಟಕದಲ್ಲೆಲ್ಲಾ
ಪ್ರದರ್ಶನಾರಂಭ
ಅಂಬಿಕಾ ಫಿಲಂಸ್ ರವರ
ಶಿವರಾತ್ರಿ ಮಹಾತ್ಮೆ
(ಕನ್ನಡ)
ಸಾಹಿತ್ಯ
ಬಿ. ಸದಾಶಿವಯ್ಯ + ಬಿ. ಉದಯಶಂಕರ
ಸಂಗೀತ
ಶಿವಪ್ರಸಾದ್
ಛಾಯಾಗ್ರಹಣ
ಮಾಧುರ್
ನಿರ್ದೇಶಕ ... ಪಿ. ಆರ್. ಕೌಂಡಿಣ್ಯ
ನಿರ್ಮಾಪಕರು.. ಪಿ. ಆರ್. ಕೌಂಡಿಣ್ಯ + ಎಸ್. ಎಸ್. ರಾಜು
... ಹಂಚಿಕೆ ...
ಮೈಸೂರು ಕರ್ನಾಟಕಕ್ಕೆ ...
ವಿಜಯಾ ಪಿಕ್ಚರ್ಸ್ ಸರ್ಕ್ಯೂಟ್, ಬೆಂಗಳೂರು-9.
ಬೊಂಬಾಯಿ ಕರ್ನಾಟಕಕ್ಕೆ ...
ಶ್ರೀನಿವಾಸ್ ಪಿಕ್ಚರ್ಸ್, ಗದಗ.

ಕೊರವಂಜಿ

ಸಂಪುಟ ೨೨ ಫೆಬ್ರವರಿ ೧೯೬೪ ಸಂಚಿಕೆ ೧೧

★ ಕುಹಕಿಡಿಗಳು ★

"ಪ್ರಧಾನಿ ನೆಹ್ರೂ ಅವರಿಗೆ ಆರೋಗ್ಯ ಭಾಗ್ಯವನ್ನು ದಯಪಾಲಿಸು" ಎಂದು ಕೊರವಂಜಿಯು ಮಂಡಿಯೂರಿ ಪ್ರಾರ್ಥಿಸುತ್ತಾಳೆ.

* * * *

—ಖುಲ್ನ-ಕಲ್ಕತ್ತಾ ಪ್ರಸಂಗಗಳನ್ನು ನೋಡಿದರೆ

—ಎತ್ತಿಗೆ ಜ್ವರ ಬಂದಾಗ ಎಮ್ಮೆಗೆ ಬರೆ ಹಾಕಿದರೆ ವಾಸಿಯಾಗುತ್ತೇನೋ?

* * * *

ಕಾಲೇಜ್ ಹುಡುಗರ ಫೀ ಏರಿಕೆಯನ್ನು ಇಳಿಸುವುದರಿಂದ ಸರ್ಕಾರಕ್ಕೆ ಸುಮಾರು ೫೦.೬೦ ಲಕ್ಷ ರೂ. ಖೋತಾ ಬರುತ್ತದಂತೆ.

—ಪಾನನಿರೋಧವನ್ನು ಸಡಿಲಿಸಿ, ಅದೇ ಹುಡುಗರ ಪಿತೃಗಳಿಂದ ಬೇರೆ ರೀತಿ ಕಸಿದು ಖೋತಾವನ್ನು ಸರಿಪಡಿಸಬಹುದಲ್ಲ!

* * * *

ನೆಹ್ರೂ ನಂತರ ಯಾರು ಎಂಬ ಪ್ರಶ್ನೆಗೆ ೧೦,೦೦೦ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳು ಸಿದ್ಧವಾಗಿದ್ದಾರೆ ಎಂದು ಮಹನೀಯರೊಬ್ಬರು ನುಡಿದರು.

—ಗ್ರಾಮಸಿಂಹದ ಘರ್ಜನೆ!!

* * * *

ಕೇಂದ್ರ ಸಚಿವ ಸಂಪುಟಕ್ಕೆ ಸಂಜೀವಯ್ಯನವರು ಸೇರಿದರಲ್ಲಾ ಅಂತ ಸಂತೋಷಪಟ್ಟ ಸಂಜೀವರೆಡ್ಡಿಯವರು ಪಾಯಸ ಕುಡಿದರು ಅನ್ನುವುದು ಶುದ್ಧ ಕುಹಕ !

*   *   *   *

ಹೃದಯಗಳನ್ನು ತೆಗೆದು ಹೊಸ ಹೃದಯಗಳನ್ನು ಯಶಸ್ವಿಯಾಗಿ ಜೋಡಿಸುವ ಶಸ್ತ್ರ ಚಿಕಿತ್ಸಾ ದಿನಗಳು ಇಷ್ಟರಲ್ಲೇ ಬರುತ್ತವೆ ಎಂದು ವೈದ್ಯಕೀಯ ಪತ್ರಿಕೆ ನುಡಿದಿದೆ.

—ನಮ್ಮ ಅರ್ಥ ಸಚಿವರಿಗೆ ಈ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಬೇಕು!—ಹಸುವಿನ ಹೃದಯವನ್ನು ಜೋಡಿಸಬೇಕು.

*   *   *   *

ನ್ಯಾಯಾಸ್ಥಾನದಲ್ಲಿ ಮೊಕದ್ದಮೆಯನ್ನು ಹೂಡಿದ ದಿನವೇ ವಿಚಾರಣೆಗೆ ಪ್ರಾರಂಭಿಸಿ ತೀರ್ಪನ್ನು ಕೊಡಲಾಯಿತಂತೆ.

—ಏನು ಅನ್ಯಾಯ ! ಸುಳ್ಳು ಸಾಕ್ಷಿಗಳನ್ನು ಹುಡುಕುವುದಕ್ಕೆ ಮೊದಲೇ ವಿಚಾರಣೆ ನಡೆಸಿಬಿಟ್ಟರೆ ಹೇಗೆ?

*   *   *   *

ಚಾ ಎನ್ ಲೈ ಅವರ ಎದುರಿಗೆ ಪ್ಯಾರಿಸ್ಸಿನ ಬೆಡಗು ಬಿನ್ನಾಣವನ್ನೆಲ್ಲಾ ಪ್ರದರ್ಶಿಸುತ್ತಾರಂತೆ.

—ಅಳಿಯನ ಮುಂದೆ ಅತ್ತೆ ಮೆರೆದ ಹಾಗೆ.

*   *   *   *

ಶ್ರೀ ಸುಬ್ರಹ್ಮಣ್ಯಂ ಅವರು ಕಾಂಗ್ರೆಸ್ಸಿಗೆ ಪ್ರತಿ ಪಕ್ಷ ಕಟ್ಟುವರಂತೆ

—ಏನಾದರೂ ಮೊರಾರ್ಜಿ, ಎಸ್. ಕೆ. ಪಾಟೀಲ್ ಇವರುಗಳ ಬೆಂಬಲ ವಿದೆಯೋ ?

*   *   *   *

ಎಂಟು ವರ್ಷಗಳಿಂದ ಸಿನಿಮಾ ನೋಡಿಯೇ ಇಲ್ಲ ಎಂದೊಬ್ಬ ಕಾಲೇಜು ವಿದ್ಯಾರ್ಥಿಯು ಹೇಳಿಕೆ ಇತ್ತಿದ್ದಾನೆ.

— ಪರಮ ವೀರಚಕ್ರ ಕೊಡಬೇಕಾದ್ದೆ !

*   *   *   *

ಪಾನ ನಿರೋಧದ ಚಳುವಳಿಯ ಅಂಗವಾಗಿ

— ಮೊಗಲ್ ಸಾರಾಯ್ ಊರಿನ ಹೆಸರನ್ನು ಬದಲಾಯಿಸುತ್ತಾರಂತೆ !

ಇದು ಕೇಳಿದ್ದೀರಾ ?

ನರವಾಹನ ಎಂದು ಹೆಸರು ಪಡೆದಿರುವ ಕುಬೇರ ಅಷ್ಟದಿಕ್ಪಾಲಕರಲ್ಲಿ ಒಬ್ಬ ಎಂದು ಎಲ್ಲರಿಗೂ ತಿಳಿದ ವಿಷಯ. ಮಹಾ ಮಹಾ ಐಶ್ವರ್ಯವಂತ ಎನ್ನುವುದೂ ಸಾಮಾನ್ಯವಾಗಿ ಜಾಹಿರಾತಾಗಿದೆ. ಹಾಗಾಗಿ ಕೂಲಿಗಳಿಬ್ಬರು ವ್ಯಾಪಾರಕ್ಕೆ ಹೋದಾಗ ಒಬ್ಬಾತ ಹಲ್ವ ಕೊಂಡುಕೊಂಡರೆ ಏನೋ ಕುಬೇರ ಆಗಿಬಿಟ್ಟೆಯೋನೋ ಎಂದು ಇನ್ನೊಬ್ಬ ಗೇಲಿಮಾಡುತ್ತಾನೆ. ಆದರೆ ಕುಬೇರ ಹೇಗೆ ಐಶ್ವರ್ಯವಂತನಾದ, ಹದಿನಾಲ್ಕು ಲೋಕಗಳಲ್ಲಿ ಅತ್ಯಂತ ಹಿರಿಯ ಪ್ರಥಮ ಶ್ರೀಮಂತನಾದ ಎನ್ನುವ ಗುಟ್ಟು ಸುಮಾರು ಜನರಿಗೆ ತಿಳಿಯದು. ನನಗೂ ತಿಳಿದಿದ್ದಿಲ್ಲ.

ಮೊನ್ನೆ ಮೊನ್ನೆ ನಮ್ಮ ಊರಿನಲ್ಲಿ ಲೋಕ ಕಲ್ಯಾಣಕ್ಕೆಂದು, ಹಾಗೂ ಪುರೋಹಿತರ ದಕ್ಷಿಣೆಯ ಪ್ರಯುಕ್ತ, ಕಾಳಸಂತೆ ಸಾಹುಕಾರರೊಬ್ಬರು "ಯಜ್ಞ" ಮಾಡಿಸಿದರು. ಋತ್ವಿಕ್ಕುಗಳೆಲ್ಲಾ ಗಿರುಕಾಯಿಸಿಕೊಂಡು ಅಷ್ಟದಿಕ್ಪಾಲಕರನ್ನೂ ಆಹ್ವಾನಿಸಿ ಹವನಗಳನ್ನು ಅರ್ಪಿಸಿದರು.

ನಾನೂ ಅಲ್ಲಿಗೆ ಹೋಗಿದ್ದೆ. ಬೆಂದ ಯಾಗದಲ್ಲಿ ಆದಷ್ಟು ಹಿರಿದುಕೊಳ್ಳೋಣ ಅಂತ. ಆವಾಗ ಕುಬೇರ ಬಂದಿದ್ದನ್ನು ಕಂಡೆ. ಅಷ್ಟು ಶ್ರೀಮಂತನಾದರೂ, ಯಾರಾದರೂ ಯಜ್ಞಮಾಡಿ ಒಂದು ಸೌಟು ತುಪ್ಪ ಹವನ ಕೊಟ್ಟರೆ, ಜಂ ಅಂತ ಓಡಿಬಂದುಬಿಡುತ್ತಾನೆ. ಹಾಗೆ ಬಂದಾಗ ನಾನಲ್ಲೇ ಇದ್ದೆ. ಅವನ ಧೋತ್ರದ ತುದಿಯನ್ನ ಹಿಡಿದುಕೊಂಡೆ.

ಸ್ವಾಹಾ ಅಂತ ಹವನ ಕೊಟ್ಟರು ಕುಬೇರ ಸ್ವೀಕರಿಸಿದ. ಆ ಮೇಲೆ ಹಾರಿ ಹೋಗಬೇಕು, ಆಗ ಧೋತ್ರ ಬಿಗಿಯಿತು. ಹಿಂತಿರುಗಿದ. ನನ್ನ ಕಂಡ.

ಯಾರಪ್ಪಾ! ನೀನು ಏನು ಬೇಕು ಅಂದ

ನಾನು ಕೊರವಂಜಿ ವರದಿಗಾರ, ನೀವು ಶ್ರೀಮಂತರಾದುದು ಹೇಗೆ ಅಂತ ತಿಳಿದುಕೊಳ್ಳಬೇಕು. ನಮ್ಮ ಓದುಗರಿಗೆ ಬಹಳ ಕಾತುರ. ನಿಮ್ಮ ಹಾಗೆ ಆಗಬೇಕು ಅಂತ. ಸ್ವಲ್ಪ ವಿವರಿಸ್ತೀರಾ ಎಂದೆ.

"ಅಷ್ಟೇನೇ! ಗುಟ್ಟು ಇಷ್ಟೇ ಕಣಯ್ಯಾ! ನಾನು ಮದುವೆಯಾದ ಹೆಣ್ಣು ಬಲು ಮೋಜಿನವಳು. ಖರ್ಚು ಎಂದರೆ ಲೆಕ್ಕನೇ ಇಲ್ಲ ಅವಳಿಗೆ. ಅವಳ ತಂದೆ ಪ್ಲಾನಿಂಗ್ ಕಮಿಷನ್ನಿನಲ್ಲಿದ್ದರಂತೆ. ಅವರ ಚಾಳೀನೇ ಇವಳಿಗೆ ಇವಳು ಖರ್ಚು ಮಾಡಬಹುದಾದಷ್ಟನ್ನೂ ನಾನು ಸಂಪಾದಿಸುಕ್ಕೆ ಸಾಧ್ಯವೇ? ನೋಡೋಣ ಅನ್ನಿಸಿತು. ಹಾಗಾಗಿ ಅತುಲೈಶ್ವರ್ಯವಂತನಾದೆ. ಆಗ ಇಂದ್ರ ಕರೆದು ನೀನೂ ಒಬ್ಬ ದಿಕ್ಪಾಲಕ ಆಗು ಅಂದ"—ಎಂದು ವಿವರಣೆ ಕೊಟ್ಟ.

—ಕುಮಾರ್

ಏನು ಮಹಾ ಕೊಳ್ಳೇ ಹೋಗೋದು

ಪದ್ಮಣ್ಣ, ಇತ್ತೀಚಿಗೆ ಮೂರು ಅವಿವೇಕದ ಕೆಲಸಗಳನ್ನು ಮಾಡಿದ. ಅದರ ಫಲ ಈಗ ಅನುಭವಿಸುತ್ತಿದ್ದಾನೆ.

ಪುರಂದರ ದಾಸರಿಗೆ ಗುಡಿ ಕಟ್ಟಿಸುತ್ತೇನೆಂದು ಒಬ್ಬಾತ ಪದ್ಮಣ್ಣನಿಂದ ಐವತ್ತು ರೂಪಾಯಿಗಳನ್ನು ಸುಲಿದುಕೊಂಡ. ಕೊನೆಗೆ ಆತ ತನಗೊಂದು ಬಂಗಲೆ ಕಟ್ಟಿಸಿಕೊಂಡಿದ್ದು ತಿಳಿಯಿತು ಮನೆಯಲ್ಲಿ ಒಂದು ರೇಡಿಯೋ ಇದ್ದಂತೆ, ಹರಾಜಿನಲ್ಲಿ ಅಗ್ಗವೆಂದು ನೂರೈವತ್ತು ಕೊಟ್ಟು ಕೊಂಡುಕೊಂಡ. ಒಂದು ಟ್ರಾನ್ಸಿಸ್ಟರು. ಮೌನವ್ರತದ ಮುನೀಶ್ವರ ಎಂದು ಮತ್ತೆ ತಿಳಿಯಿತು. ಅದರಿಂದ ಹೊರಡುವ ಸದ್ದು ಹೆಚ್ಚೆಂದರೆ ಗೊರಕೆಯದ್ದು. ಮೂರನೇದಾಗಿ ರಷ್ಯಾಕ್ಕೆ ರಫ್ತುಮಾಡಿ ದೊಡ್ಡ ಗಂಟು ಮಾಡಬಹುದೆಂದುಕೊಂಡು ಪದ್ಮಣ್ಣ ಬಾಳೆತೋಟ ಮಾಡಿದ್ದು, ಹೂದೋಟವನ್ನು ನೆಲಸಮಮಾಡಿ. ಆದರೆ ಆತ ನೆಡಿಸಿದ್ದೆಲ್ಲ ಶ್ರಾದ್ಧಕ್ಕಾಗುವ ಬಾಳೆಕಾಯಿಗಳನ್ನು ಬಿಡುವ ಗಿಡಗಳನ್ನು ಎಂದು ಅರಿವಾದದ್ದು ಅನಂತರವೇ. ಈ ರೀತಿ ಬೇಸ್ತುಬಿದ್ದ ಪದ್ಮಣ್ಣ ಕನಿಕರಕ್ಕೆ ಪಾತ್ರನೆಂಬುದೇನೋ ನಿಜ. ಆದರೆ ಕನಿಕರ ಅವನಿಗೆ ದೊರೆಯಲಿಲ್ಲ ಸರಕಾರ ಕೂಡ ಹೀಗೆ ಎಷ್ಟೋಸಲ ಬೇಸ್ತುಬೀಳುತ್ತದಲ್ಲ. ಆಗ ಅದನ್ನು ಕನಿಕರಿಸಿದರೆ ತಾನೆ ಪದ್ಮಣ್ಣನನ್ನು ಕನಿಕರಿಸೋದು!

"ಅಷ್ಟೊಂದು ಹಣ ಸಿಕ್ಕಸಿಕ್ಕದ್ದಕ್ಕೆ ತೆರುತ್ತಿದ್ದ. ಇನ್ನೂ ಒಂದೆರಡು ಸಾವಿರ ಜಾಸ್ತಿಕೊಟ್ಟು ಮೊನ್ನೆ ಸಾಧ್ಯವಿಲ್ಲವೆಂದು ಬಿಟ್ಟದ್ದ ಇಂಜನೀರ್ ಹುಡುಗನಿಗೇ ಸಾವಿತ್ರೀನ ಗಂಟುಹಾಕಬಾರದೇಕೆ?" ಎಂದು ಪೀಡಿಸತೊಡಗಿದ್ದಾಳೆ ಪದ್ಮಣ್ಣನ ಹೆಂಡತಿ.

ಕಾಲೇಜ್ ಕಾಂಪೌಂಡಿನಲ್ಲಿ ಉಪವಾಸಮಾಡಿ ಕೊಬ್ಬಿದ್ದ ಪದ್ಮಣ್ಣನ ಮಗನೋ ಇನ್ನು ನಾಲ್ಕು ಟೆರಿಲೀನ್ ಷರ್ಟುಗಳು ಬೇಕೇ ಬೇಕು. ಬೇಡದ್ದಕ್ಕೆ ಸುರಿಯೋದಕ್ಕೆ ನಮ್ಮನ್ನೇಲಿ ಬೇಕಾದಷ್ಟು ದುಡ್ಡಿದೆ' ಎಂದೆಲ್ಲ ವಟಗುಟ್ಟುತ್ತ ಮೋರೆಗೆ ಸ್ನೋ ಬಳಿದುಕೊಂಡದ್ದನ್ನು ಕಂಡ ಪದ್ಮಣ್ಣ.

ಆದೇ ರೀತಿ ಅಡಿಗೆಯವನೂ ಕೆಲಸದವಳೂ ತಮ್ಮ ವಾದ ಸರಣಿ ತೆಗೆದರು "ನಿಮಗೆ ಎಷ್ಟು ಬರುತ್ತೋ ಎಷ್ಟು ಹೋಗುತ್ತೋ ಒಂದು ಹತ್ತು ಹೆಚ್ಚಿಸಿಬಿಡಿ ಸ್ವಾಮಿ" ಎನ್ನ ತೊಡಗಿದ್ದಾರೆ. "ಅಷ್ಟು ಏರಿಸಿದ ಮಾತ್ರಕ್ಕೆ ಏನು ಕೊಳ್ಳೆ ಹೋಗೋದು" ಎಂದು ಅವರು ರಾಜಾರೋಷವಾಗಿ ಸಾರತೊಡಗಿದ್ದಾರೆ.


ನಿಜ   ಏನು ಕೊಳ್ಳೆ ಹೋಗೋದು?

ಕೆಟ್ಟೆ ಅಂತಾನೆ ಪದ್ದಣ್ಣ.

ನನ್ನದೇನು ಮಹಾ? ಸರಕಾರದ ಅವಸ್ಥೆ ಅದಕ್ಕಿಂತಲೂ ಕೇಳು ಅಂತ ಅವನನ್ನು ಸಂತೈಸಬೇಕಾಯಿತು. ಸರಕಾರವನ್ನ ವಿದ್ಯಾರ್ಥಿಗಳೂ ತರಾಟೆಗೆ ತೆಗೆದುಕೊಂಡರು ನೌಕರರೂ ಜಾಸ್ತಿ ಕೊಡಿ ಅಂತಾರೆ ನಕ್ಷತ್ರಿಕನ ಹಾಗೆ ಟ್ಯಾಕ್ಸ್ ವಸೂಲಿ ಮಾಡುವುದು ಯಾವ ಕರ್ಮಕ್ಕೆ ಅಂತಾರೆ ದುಡ್ಡುಳ್ಳವರು. ಎಲ್ಲರ ವಾದ ಒಂದೇ. ಈ ಪ್ಲಾನ್‌ಗಳಿಗಾಗಿ ದುಡ್ಡು ನಾನಾ ವಿಧದಲ್ಲಿ ಪೋಲಾಗ್ತಾ ಇದೆ ಎಂದು ಬಣ್ಣಿಸಿ ನಮಗೊಂದಿಷ್ಟು ಕೊಟ್ಟರೆ, ನಾವು ಕೊಡೋದನ್ನು ಕಡಮೆ ಮಾಡಿದರೆ, ಏನು ಮಹಾ ಕೊಳ್ಳೆಹೋಗೋದು ಅಂತ ರೇಗ್ತಿದಾರೆ. ಪದ್ದಣ್ಣನದೂ ಅದೇ ಅವಸ್ಥೆ ತಾನೆ? ಏನೋ ಒಂದೆರಡು ಅವಿವೇಕದ ಕೆಲಸ ಮಾಡಿದ ಅಷ್ಟಿಷ್ಟು ಕಳಕೊಂಡ. ಅದಕ್ಕಾಗಿ ಉಳಿದವರೆಲ್ಲ ಅವನನ್ನು ಸುಲಿಯೋದೆ, ಏನು ಮಹಾ ಕೊಳ್ಳೆ ಹೋಗೋದು ಅಂತ?

"ಹೀಗೆ ಮಾಡಿದರೆ ನಾನು ಉಳಿಯೋದುಂಟೇ?" ಅಂತ ಗೋಗರೀತಾನೆ ಪದ್ದಣ್ಣ. "ನಾನು ಬಿಡು, ಸರಕಾರವಾದರೂ ಉಳಿಯುತ್ತೆ?" ಅಂತಾನೆ ಆತ.

— ರಾಮಿ



ಶ್...ಕ್ಷಮಿಸಿ ಸ್ವಾಮಿನ್...ಈ ಹಾರ ಬೆಳಿಗ್ಗೇನೇ ನಿಮಗಾಗಿ ತರಿಸಿದ್ದು !
ಹೊತ್ತಾಗಿ ಹೋಗಿಬಿಟ್ಟಿದೆ!...

ನವಕವಿ ಕಿಟ್ಟಣ್ಣಯ್ಯ

ನವಕುಟೀರ

ತಾ||......................

ಡಿಯರ್ ಸಂಪಾದಕ್—

ಈ ಪತ್ರದ ಜೊತೆಗೆ ಕೆಲವು ಕವನಗಳನ್ನೂ ಕಳಿಸಿದ್ದೇನೆ. ಪ್ರಕಟಿಸದಿದ್ದರೆ ನನಗೇನೂ ಕೊರತೆ ಇಲ್ಲ. ಒಂದು ಜೀವನದ ನಾಶ ಅಷ್ಟೆ.

ಆದರೆ! ಲೋಕಕ್ಕಾಗುವ ನಷ್ಟ ತುಂಬಿಕೊಡುವ ಜವಾಬ್ದಾರಿ ನಿಮ್ಮದು. ನಾಳೆ ಜನ ಅದನ್ನೇಕೆ ಕೊಂದಿರಿ ಎಂದರೆ ಆ ಕಾವ್ಯ ಕನ್ಯೆಯ ಹತ್ಯೆ ಮಾಡಿದ ಸಾಹಿತ್ಯೋದ್ಧಾರಕ ಇದೇ ಈ ಸಂಪಾದಕ್ ಎಂದು ನಾನು ನಿಮ್ಮ ಹೆಗಲು ತೋರಿಸುವೆ.

ಇರಲಿ—ಬೈ ದಿ ಬೈ— ಆಲ್ ದೀಸ್ ನ್ಯೂ ಪೊಯಟ್ರಿ ರಿಕ್ವೈರ್ಸ್ ನ್ಯೂ ಬ್ಲೆಂಡ್ ಆಫ್ ಬ್ರೇನ್— ಜಸ್ಟ್ ಕೆನ್ ಯು ಥಿಂಕ್ ಅವರ್ ಕನ್ನಡಿಗಾಸ್ ಹ್ಯಾಡ್ ದಿಸ್ ನ್ಯೂ ಬ್ರೈನ್ ಆಸ್ ಲಾಂಗ್ ಬ್ಯಾಕ್ ಆಸ್ 814-877 ???

ಬೇಡ ಡೊಂಟ್ ಕೂಡ್ಸ್ ಯುವರ್ ಹುಬ್ಬು—ಏನು ಹೇಳಿದ್ದ ನೃಪತುಂಗ!

ಪದನರಿದು ನುಡಿಯಲುಂ, ನುಡಿ
ದುದ ನರಿದಾರಯಲು ಮಾರ್ಪರಾ ನಾಡವರ್ಗಳ್
ಚದುರರ್, ನಿಜದಿಂ ಕುರಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ ||

—ಅರ್ಥವೇ ಅಂಡರ್ ಲೈನ್ ಮಾಡಿರೋದು ನೆನಪಿರಲಿ ಕಾವ್ಯ ಪ್ರಯೋಗ ಪರಿಣತ ಮತಿಗಳ್.... ಯಾರು ಈ ಕನ್ನಡ ನಾಡವರ್ಗಳ್—ಕಾವೇರಿಯಿಂದಮಾ ಗೋದಾ ವರಿವರಗಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ....

ಅಂದಿನಿಂದ ಆ ಕೆಚ್ಚೆದೆಯ ಕನ್ನಡಿಗ ನೃಪತುಂಗನಿಂದ ಇಂದಿನ ಈ ಕೆಚ್ಚೆದೆಯ ಕವಿ .. ಕಿಟ್ಟಣ್ಣನವರಿಗೆ ಶತಮಾನಗಳ ಕಾವ್ಯಧಾರೆ ಹರಿದ ನಾಡಿನಲ್ಲಿ ನವ್ಯತೆ ಕಾಲ ದಿಂದ ಕಾಲಕ್ಕೆ ಹರಿಯುತ್ತಲೇ ಬಂದಿದೆ ಆದರೆ ನನ್ನ ಈ ಅಂತರ್ ತುಮುಲದ ಚಂಚಲ ನವ್ಯ ಕಾವ್ಯದ ಪಟ್ಟ ಹಿಂದೆ ಇರಲಿಲ್ಲ, ಮುಂದೆ ಇರೋಲ್ಲ ಅಂತ ಮಾತ್ರ ಹೇಳಬಲ್ಲೆ.

ಬಟ್ — ಒಬ್ಬ ಕವಿಯ ಅಂತರಂಗದ ಸುಪ್ತಭಾವನೆಗಳು ಹುಚ್ಚೆದ್ದು — ರೊಚ್ಚೆದ್ದು — ಕೆಚ್ಚನ್ನು ಹಚ್ಚಿದ ಮದ್ದಿನ ಚೀಲದಂತೆ ಸಿಡಿದು ಕಾವ್ಯವಾಗಿ ಬಿಳಿ ಹಾಳೆಯ ಮೇಲೆ ಹರಡಿದಾಗ—ನವ್ಯ ಕಾವ್ಯ ಅವತಾರವಾಗುತ್ತದೆ....So from Nrupatunga to me there is a constant politic revolution going on!

ಅದಿರ್ಲಿ—ಕಮಿಂಗ್ ಟು ದಿ ಪಾಯಿಂಟ್ ಇದರ ಜೊತೆಗಿರುವ ನವ್ಯ ಕವಿತೆಗಳು ಪ್ರಕಟವಾದರೆ ನಮ್ಮ ರಸ್ತೆಯಲ್ಲೇ ಒಂದು ಕ್ರಾಂತಿ ಆಗುತ್ತದೆ – ಕಾವ್ಯ ಕ್ರಾಂತಿ that is ಸರಸ್ವತಿಯ ಮಂದಿರ ಸರಸ್ವತಿ—ಅವಳೇ ನನ್ನ ಎದುರು ಮನೆ ಹುಡುಗಿ—ಷಿ ಥಿಂಕ್ಸ್ ಐ ಯಾಮ್ ಯ ಬುದ್ಧು .. ಹಹ್ಹ....ಸರಿ ಇಲ್ಲಿ ಅವರವರ ಅಭಿಪ್ರಾಯ ಅವರವರಿಗೆ .... ಕ್ರಾಂತಿ ಏಕೆ ಎಂದು ನೀವು ಅನ್ನಬಹುದು .... ನನ್ನ ಮನಸ್ಸಿನ ಅಂದೋಳನ ಶಾಂತವಾಗಬೇಕಾದರೆ ಸರಸ್ವತಿ ಷುಡ್ ಮ್ಯಾರಿ ಮಿ. ಹರ್ ಫಾದರ್ ರಿಟೈರ್ಡ್ ವೆಟರ್ನರಿ ಡಾಕ್ಟರ್....ಅವರು ನನ್ನ ಕವಿತೆಗಳನ್ನು ಮೆಚ್ಚಿಕೊಂಡಿದ್ದಾರೆ. ಬುದ್ಧಿವಂತರು ಒಂದು ಸಲ ಥಡೀರ್ ಅಂತ ನನ್ನನ್ನು ಕೂಗಿ ಕರೆದು

"ಅಯ್ಯಾ 'ಯಮಕ' ಅಂದರೇನು?"—ಎಂದರು.

"ಸ್ವಾಮಿ, ಇದು ಶಬ್ದಾಲಂಕಾರಗಳಲ್ಲಿ ಒಂದು. ಮುಖ್ಯವಾಗಿ ಇದರಲ್ಲಿ ಮೂರು ವಿಧಗಳಿವೆ—ಒಂದು ಅನುಪ್ರಾಸ—ಎರಡು ಯಮಕ—ಮೂರು ಚಿತ್ರ ಕವಿತ್ವ ...ಅಂತ"

—ಎಂದು ಇರೋ ವಿಚಾರ ತಿಳಿಸಿದೆ.

"ಅಪ್ಪಾ ಯಮಕ ಅಂದ್ರೆ ಎಂಥಾ ಅಲಂಕಾರ!!"—ಎಂದು ನನ್ನ ನೋಡಿ ನಕ್ಕುಬಿಡೋದೇ ಆ ಸರಸ್ವತಿ! ನನಗೆ ರೇಗಿತು. ಮಡಿಸಿದ್ದ ಷರಟು ತೋಳನ್ನು ಬಿಡಿಸಿ ಎಮುಕೆಯಂತಹ ಕೈತೋಳುಗಳನ್ನು ಮುಚ್ಚಿಕೊಂಡೆ.

"ಎಮುಕೆ ಅಲ್ಲರೀ ಯಮಕ—ಅದೊಂದು ಕಾವ್ಯದ ಸಂಪ್ರದಾಯ. ಮೂರು ಅಥವ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದವೊ ಪದಭಾಗವೋ ಒಂದು ಪದ್ಯದ ಆದಿ ಮಧ್ಯ ಅಂತ್ಯ ಈ ಸ್ಥಾನಗಳಲ್ಲಿ ನಿಯತವಾಗಿ ಪುನಃ ಪುನಃ ಬಂದರೆ ಅದಕ್ಕೆ ಯಮಕವೆಂದು ಹೆಸರು ... ಪುನಃ ಪುನಃ ಬಂದರೆ ಯಮಕನಲ್ಲ ಕಕವ ಯಮ ಅಂತ ಅನ್ನಬೇಕು...."

—ಅಂತನ್ನಬಹುದೇ ಆ ಸರಸ್ವತಿ. ಆದರೆ ತಂದೆ ಮಾತು ಮೀರೋಳಲ್ಲ ಅವಳು; ಅದೇ ಧೈರ್ಯ ನನಗೆ. ನಾನು ಯಮ ಇದ್ದ ಹಾಗಿಲ್ಲ. ಅದು ಅವಳ ಕೊಬ್ಬು ಅಷ್ಟೆ. ಸಂಪಾದಕರೇ ಆ ಸೊಗಸಿ ಸರಸ್ವತಿಯ ನಡಿಗೆ ಅವಳ ರೂಪು ಬಳ್ಳಿಯಂತಹ ಆಕೃತಿಗೆ ನಾನು ನಾನೇನು ನನ್ನ ಕವಿ ಹೃದಯ ಮಾರು ಹೋಗಿದೆ....

ಹೊಸ ಭಾವನೆಗಳು ನವ್ಯ ಕವಿತೆಯ ರೂಪದಲ್ಲಿ ಹೊರಬಂದಿದೆ.... ಈ ಕವಿತೆಗಳನ್ನು ನಾನೇ ಬರೆದಿದ್ದು ಪ್ರಕಟಣೆಗೆ ಯೋಗ್ಯ ಎಂದು ಅವಳಿಗೆ ಮನದಟ್ಟು ಮಾಡಿಸುವ ವರೆಗೆ ಅವಳು ನನ್ನನ್ನು ಜಾಣನೆಂದೇ ತಿಳಿಯುವುದಿಲ್ಲ

ಆಗಮ, ಪ್ರಕೃತಿಭಾವ, ಸಂಧಿ ವಿಕಲ್ಪ, ಸ್ವರಸಂಧಿ ಇವೆಲ್ಲ ಸಂಧಿ ಪ್ರಕರಣದ ವಿವಿಧ ಭಾಗಗಳು ಎಂದು ನಿಮಗೇ ತಿಳಿದಿದೆ

ಅವಳನ್ನು ಸಂಧಿಸಿದ್ದು Ash Wednesday that is ಆಷ್ ಬೂದಿ ಅವಳು ಮುಖಕ್ಕೆ ತುಂಬಾ ಪೌಡರನ್ನು ಬೂದಿಯಂತೆ ಸಿಂಪಡಿಸಿಕೊಂಡು ಬಂದ ಆ ಬುದ್ಧವಾರವೇ ನನಗೆ ಬುದ್ಧ ಅಂತ ಅಂದದ್ದು. ದಿಸ್ ಇಸ್ ವೆರಿ ಬ್ಯಾಡ್.... ಷಿ ನೋಸ್ ಷಿ ಲೈಕ್ಸ್ ಮಿ ಆದರೆ ತಂದೆಗಿಂತ ಮಗಳಿಗೇ ಯೋಚನೆ ಬಹಳ ವಾದಂತಿದೆ.

ಹಳೇ ಕಾಲದಲ್ಲಿ ಕನ್ಯೆಯೊಬ್ಬಳನ್ನು ಕವಿ ಪ್ರೀತಿಸಿದರೆ ಅವಳ ತಂದೆ ಕೇಳುತ್ತಿದ್ದನಂತೆ ಕಾವ್ಯವನ್ನೆನೋ ಬರೀತೀರಿ ಆದರೆ ಜೀವನಕ್ಕೇನು ಮಾಡ್ಕೊಂಡಿದ್ದೀರಿ? ಪಾಪ ಒಬ್ಬರು ಕಾವ್ಯ ಬರೆದು ಜೀವಿಸೋದೇ ಕಷ್ಟ ಇನ್ನು ಲಗ್ನಾನೂ ಯಾಕೆ ಮಾಡ್ಕೊಂಡು ಆ ಪ್ರಾಣಿಗೆ ಪ್ರಾಣ ಹಿಂಡ್ತೀರ ಅಂತ ಹೇಳುತ್ತಿದ್ದರಂತೆ. ಈ ಸರಸ್ವತಿ ಅಪ್ಪ He is ready—ಆದರೆ ಈ ಸರಸ್ವತಿದೇ ತಕರಾರು....ಕಾವ್ಯ ಸುಧೆ ಹೊಟ್ಟೆ ತುಂಬಿಸೋ ಕಾಲ ಬಂದಿದೆಯೆ? ಅಂತಾಳೆ.

ಹನ್ನೆರಡು ತಿಂಗಳುಗಳ ಸತತ ಪರಿಶ್ರಮದಿಂದ ನನ್ನ ನವ್ಯ ಕಾವ್ಯಗಳ ಕಂತೆಯನ್ನು ಸರ್ಕಾರದ ಕೃಪಾಶ್ರಯದಲ್ಲಿ ವರ್ಷಂಪ್ರತಿ ಕೊಡುತ್ತಿದ್ದ ಉತ್ತಮ ಸಾಹಿತ್ಯಕ್ಕೆ ಬಹುಮಾನ ಬಂದೀತೆಂದು ಕಳಿಸಿದ್ದೆ. ಈ ಬಹುಮಾನ ಪ್ರಾರಂಭವಾದಾಗ ಬೇಲಿಯೇ ಎದ್ದು ಹೊಲ ಮೇಯ್ದಂತೆ ತೀರ್ಪುಗಾರರು ತಂತಮ್ಮ ಗ್ರಂಥಗಳಿಗೆ ಚೆಕ್ಕು ಬರೆದುಕೊಂಡರು. ಈ ವರ್ಷದ ತುರ್ತು ಪರಿಸ್ಥಿತಿ ನೇರವಾಗಿ ಸಾಹಿತಿಗಳ ಬೆನ್ನಿಗೇ ಚೂರಿಯಾಗಿ ಬಂದು ಕೂತಿದೆ. ಕಾಪಿ ತಿದ್ದಿದಂತೆ ಬರೆದ ಕಾವ್ಯಕ್ಕೆ ಮಣ್ಣು ತೂರು ಗುಂಡು ಹಾರಿಸಿದಂತೆ ಈ ವರ್ಷ ಬಹುಮಾನವಿಲ್ಲ ಅಂತ ಘೋಷಿಸಿತು ಘನ ಸರ್ಕಾರ. ಸರಿ ನನಗೆಲ್ಲಿಂದ ಬರಬೇಕು ಇನ್ನು ಬಹುಮಾನ! ಮಾನ ಬಂದರೆ ಸಾಕು ಬಹುಮಾನ ಬೇಡ ಅಂತ ತೀರ್ಮಾನಿಸಿ ಅದೇ ಕವಿತೆಗಳನ್ನು ತಮ್ಮ ಘನ ಸಂಪಾದಕದಲ್ಲಿ ಪ್ರಕಟವಾಗುತ್ತಿರುವ "ಘನಂದಾರಿ" ಪತ್ರಿಕೆಗೆ ಕಳಿಸಿದ್ದೇನೆ. ಇದು ಪ್ರಿಂಟಾದರೆ ಖಂಡಿತ ಸರಸ್ವತಿ ಈ ಕಾವ್ಯಗಳಿಗೆ ಯೋಗ್ಯತೆ ಇದೆ ಎಂದು ಒಪ್ಪಿಕೊಳ್ಳುವ ಸಂಭವ ಉಂಟು.

ಸಂಧಿಕಾಲ —ಪ್ರಕೃತಿ—ಪುರುಷ—
But this is Hell
ಬೇಕಾದ್ದು ಬರಲೆಂಬ ಪೌರುಷ
who is there to cat the Bell!

ಎತ್ತಲೇಂ ಚಲುವಿಲ್ಲ
ಸಂಗಡಿಗರಾರಿಲ್ಲ
ಗಿಳಿನಿಂದು ಗೊರವಂಕ

ಮುಗ್ಧ ಮೋಹನ ವದನೆ ಮುಕುರದೊಳ್ ನೋಡಿನೀ
ನಾರ ನೆನದಿಂದು ನಸುನಗುತಲಿರುವೆ?
ಎನ್ನುತ್ತಾ ಹುಲಿರಾಯನಾಗಲೇ ತನ್ನ ಪ್ರಾಣವ ಬಿಟ್ಟಿತು ||

ಗೊತ್ತು. I know ಮೇಲಿನ ಕಾವ್ಯದಲ್ಲಿ ಶ್ರೀ ಪೀಸಿ, ಶ್ರೀ ಡಿ. ವಿ ಜಿ ಅವರ ಸಾಲುಗಳು ನುಸುಳಿವೆ. ಇಲ್ಲಿ ನಾನು ಪುಣ್ಯಕೋಟಿಯಂತಹ ಗೋವು ಅವಳ ಫಾದರ್ರು ರಿಟೈರ್ಡ್ ವೆಟರ್ನರಿ ಡಾಕ್ಟರು ಬೇಕಾದರೆ ನಾಡಿ ನೋಡ್ಲಿ-ಅವುಗಳು, ಹೆಸರಾಂತ ಕನ್ನಡ ಕವಿಗಳ ಸಾಲುಗಳೇ ಆಯ್ತು, ಅಂದಮೇಲೆ ಪ್ರಿಂಟಿಸುವುದರಲ್ಲಿ ತಪ್ಪೇನು?

ಸರಸ್ವತಿ ಮೊಂಡು ಹುಡುಗಿ, ಅನ್‌ಲೆಸ್ ಸಂ ಥಿಂಗ್ ಗ್ರೇಟ್ ಈಸ್ ದೇರ್ She will not look at me ಇದು ನಿಜ. ಆದ್ದರಿಂದ ಪ್ರಿಯ ಸಂಪಾದಕರೇ ಈ ಲಗ್ನ ಆಗುಗೊಡಿ and ಸೇವ್ ಮೈ ಕವಿ ಹೃದಯ from Extra Palpitation

ಷೇಕ್ಸ್‌ಪೀರನ ಬಗ್ಗೆ-ಪಂಪ ರನ್ನ-ನಾರಣಪ್ಪ-ಮತ್ತೆ ಈಚಿನ ಕವಿಗಳ ಬಗ್ಗೆ ಅನೇಕ ವಿಮರ್ಶೆ-ಲೇಖನ-ಇತ್ಯಾದಿಗಳು ಅವರಿಗೆ ಬೇಕಾದವರಿಂದ ಬರೆಯಲ್ಪಟ್ಟಿವೆ. ಇತ್ತೀಚಿಗೆ ಕೇವಲ ಒಂದೇ ಪುಸ್ತಕ ಪ್ರಕಟಿತ ಕವಿ. ಒಂದೇ ನವ್ಯ ಕಥೆ ಬರೆದ ಪ್ರಾಣಿಗಳ ಬಗ್ಗೆ ಮಾತ್ರ ಬೇರಾರೂ ಬರೆಯದಿದ್ದುದರಿಂದ ಅವರ-ಪೈಕಿಯವರೇ ಲೇಖನ ಬರೆದಿರಲಿಲ್ಲವೆ? ಹಾಗೆ ಒಂದೇ ಅಪ್ರಕಟಿತ ನವ್ಯ ಮಹಾ ಕಾವ್ಯದ ಕರ್ತೃವಾದ ನನ್ನ ಬಗ್ಗೆ ಏಕೆ ನೀವು ಒಂದು ಲೇಖನ-ಒಂದು ಪ್ರಶಂಸೆ ಬೇಡ ಆ ಕವಿತೆಯನ್ನು ಮಾತ್ರ ಪ್ರಕಟಿಸಬಾರದೆ?

ನೀವು ನಮ್ಮ ಜನ-ಆ ಸರಸ್ವತಿಗೂ ನೀವು ಗಂಡು ಹುಡುಕುತ್ತಿರುವುದಾಗಿ ತಿಳಿದು ಬಂದಿದೆ. ನೀವೂ ಆಕೆಗೆ ದೂರದ ಬಳಗವಂತೆ??? ನಾನೇನಾಗಿದ್ದೇನೆ. ಮಹಾಶಯರೇ-ದಯವಿಟ್ಟು ಒಂದು ಸಂಸಾರ ಕುದುರಿಸಿದ ಮಹಾ ಪುಣ್ಯ ಬರುತ್ತೆ ಈ ನವ ಕವಿತೆ ಪ್ರಕಟಿಸಿದರೆ

ಸರಸ್ವತಿಗೇ ಆಶ್ಚರ್ಯವಾಗಬೇಕು ಆ ಕವಿತೆ ಕಂಡು —

ಮೊಂಡರಗಪ್ಪೆ ಮಿಾಸೆ ತಿರುವಿತ್ತು
ಸಬ್‌ಸೀಗೇ ಸೊಪ್ಪು ಸೊಂಪಾಗಿತ್ತು.
ಅಯ್ಯೋ ಬಾಗಿಲ ಸಂದಿನಲ್ಲಿ ಕೈ ಇರುಕಿತ್ತು

Yes this is a Trap,
a Mouse Trap
ಚಿಮಣಿ ಎಣ್ಣಿ ಹಾಕಿ ಸುಡಬೇಕು
ಸುಡಬೇಕು-ಹಾಳು ಹೃದಯವಿಲ್ಲದ
ಆ ಸುಂದರ ಸರಸಿಯು ||

ಮೈ ಡಿಯರ್ ಸಂಪಾದಕ್ I dont want to bore you any more-ಇದೆಲ್ಲಾ ನೀವೇ ತಿಳ್ಕೊಂಡು ವಾಡ್ಕೋಳ್ಳಿ. ಹೆಚ್ಚು ಬರೆಯಲಾರೆ. ದಯವಿಟ್ಟು ಆ ಸರಸಿಗೆ ಈ ಕಾಗದಾ ತೋರಿಸಿಬಿಟ್ರೇರಿ! ಪುಣ್ಯ ಬರುತ್ತೆ ನನ್ನ ಕವಿತೆ ಪ್ರಕಟಿಸೇಪ್ಪಾ. ನಾನು ಅಂಗಲಾಚ್ತಾ ಇಲ್ಲ. I am demanding ಇದು ಅಳಿವು ಉಳುವಿನ ಪ್ರಶ್ನೆ—ಸರಸಿಯೇ ನನ್ನ ಜೀವ—

Oh my God give him good sense.

ಅಷ್ಟೆ ಅವನಲ್ಲಿ ನನ್ನ ಪ್ರಾರ್ಥನೆ. ಇಷ್ಟೆಲ್ಲಾ ಬರೆದಮೇಲೆ ನೀವು ಕೈಬಿಡಲಾರಿ—ಆ ಧೈರ್ಯ ಉಂಟು.

ಇತಿ, ನವ್ಯಕವಿ
ಕಿಟ್ಟಣ್ಣಯ್ಯ.

* * * *

ಪ್ರಿಯ ಸಂಪಾದಕರೇ—

ಶ್ರೀಮಾನ್ ಕಿಟ್ಟಣ್ಣಯ್ಯನವರ ನವ್ಯ ಕವಿತೆ ನಮಗೆ ಅರ್ಥವಾಗಲಿಲ್ಲ. ಅದನ್ನು ವಿವರಿಸಿ ಹೇಳಲಿಕ್ಕೆ ಅವರಿಂದಲೂ ಸಾಧ್ಯವಿಲ್ಲವೆಂದು ಗೊತ್ತು. ಸುತ್ತ ಭಾವನೆಗಳು ಎಚ್ಚೆತ್ತು ನವ್ಯ ಕವಿ ಹೃದಯದ ಮಸೀ ಕುಡಿಕೆಯನ್ನು ಕದಡಿ ರಾಡಿ ಎಬ್ಬಿಸಿ ಸಿಕ್ಕಾಪಟ್ಟೆ ಕಾಗದದ ಮೇಲೆ ಹರಡಿದೆ ಮಗು ಬಣ್ಣ ಬಳಿದ ಹಾಗೆ. ಆದರೆ ಶ್ರೀಮಾನ್ ಕಿಣ್ಣಣ್ಣಯ್ಯನವರ ಪತ್ರ ಸೊಗಸಾಗಿತ್ತು ಅವರ ಕವಿತೆಯ ಬದಲು ಅವರ ಪ್ರಿಯ ಪ್ರೇಮಿ ಸರಸಿ ಇದನ್ನು ಓದಿಯಾದರೂ ಒಂದು ಮೇಡಂ ಕೆಲಸ ಹುಡುಕಿ ಈ ಕವಿಯ ಕೈ ಹಿಡಿಯಲಿ ಎಂಬ ಉದ್ದೇಶ್ಯವೇ ಈ ಪ್ರಕಟನೆಗೆ ಪ್ರೇರೇಪಣೆ.

— ಸಂ. " ಘನಂದಾರಿ "

—ದಾಶರಥಿ ದೀಕ್ಷಿತ್

ಓಂಬಡ್ಸ್‌ಮನ್

"ಯಾಕೆ? ರಂಗಪ್ಪ, ಮುಖ ಸುಸ್ತು ಬಡಿದುಹೋಗಿದೆ? ಮೈ ಏನಾರ ಜಡ್ಡಾಗಿದೆಯಾ? ಮನಸ್ಸಿಗೇನಾರ ತಾಪತ್ರಯ ಅಂಟಿಕೊಂಡಿದ್ಯಾ" ಎಂದು ಕೇಳಿದೆ, ರಂಗಪ್ಪನ್ನ ಭಾನುವಾರ ಸಂಜೆ ರಾಮ ಮಂದಿರದಲ್ಲಿ ಅವನನ್ನು ಕಂಡಾಗ ಅಯ್ಯೋ ಅನ್ನಿಸಿತು. ಅಷ್ಟು ಕಳೆ ಇಳಿದಿತ್ತು ಅವನ ಮುಖದಲ್ಲಿ. ಭಜನೆ ಮಂದಿರಕ್ಕೆ ಬಂದವನ ಮುಖದಲ್ಲಿ ಸ್ವಲ್ಪವಾದರೂ ಮಜದ ಕಳೆ ಇರಬೇಕಲ್ಲ!

"ಮೈಯೆಲ್ಲಾ ಚೆನ್ನಾಗೇ ಇದೆ ಅಂಥಾ ತಾಪತ್ರಯ ಯಾವುದೂ ಬಡಿದಿಲ್ಲ ಆದರೆ ನಮ್ಮ ಮನೆಯಾಗ ಒಂದು ಓಂಬಡ್ಸ್‌ಮನ್ ಬಂದು ಸೇರಿಕೊಂಡುಬಿಟ್ಟಿದೆ. ಅದರಿಂದ ಸ್ವಲ್ಪ ಕಾಳಜಿ ಹತ್ತಿದೆ ಎರಡು ದಿವಸ ಆದರೆ ಸರಿ ಮಾಡಿಕೊಂಡೇನು? ಆದರೆ ತಾತ್ಕಾಲಕ್ಕೆ ಸ್ವಲ್ಪ ಫಿಕರಿ ಇದೆ" ಎಂದ ರಂಗಪ್ಪ.

ತಲೆ ಕೆರೆದುಕೆಂಡೆ. ಓಂಬಡ್ಸ್‌ಮುವ್ ಅಂತ ಎಲ್ಲೋ ಕೇಳಿದ್ದೆ. ಯಾವುದು ಅಂತ ನೆನಪಿಗೆ ಬರಲೊಲ್ಲದು. ಮನೆಗೆ ಬಂದು ಸೇರಿಕೊಂಡುಬಿಟ್ಟಿದೆ ಅಂದ ರಂಗಪ್ಪ. ಹಾವು ಚೇಳನ ತರಹ ಇರಲಾರದು. ಹಾಗಿದ್ದರೆ ರಂಗಪ್ಪ ಎಂದೋ ಅದನ್ನು ಫೈಸಲ್ ಮಾಡಿ ಬಿಡುತ್ತಿದ್ದ. ಯಾವ ವಿಷ ಜಂತುವಿಗೂ ಬೆದರೋ ಪ್ರಾಣಿ ಅಲ್ಲ ಅವ. ಅಂದಮೇಲೆ, ದೆವ್ವ ಭೂತ ಪಿಶಾಚಿಗಳ ವರ್ಗಕ್ಕೆ ಸೇರಿದ್ದಾಗಿರಬೇಕು. ಕೊಳ್ಳಿ ದೆವ್ವ, ಕುಟ್ಟಿಚಾತನ್, ಪೆರಿಯಚಾತನ್, ತೋಟದ ಚೌಡಿ, ಬೆಳದಿಂಗಳ ಮೋಹಿನಿ, ಬ್ರಹ್ಮಪಿಶಾಚಿ, ಬಾಣಂತಿಭೂತ, ಇತ್ಯಾದಿಗಳನ್ನು ಕೇಳಿಬಲ್ಲೆ. ಅದರೆ ಓಂಬಡ್ಸ್‌ಮನ್! ಇದು ಯಾವ ಜಾತಿ ಪಿಶಾಚಿ? ರಂಗಪ್ಪನ ಮನೆಗೆ ಹೇಗೆ ಬಂದು ಸೇರಿಕೊಂಡಿತು? ಯಾವ ರೀತಿ ಕಷ್ಟ ಕೊಡುತ್ತೆ? ಧೈರ್ಯದಿಂದ ರಂಗಪ್ಪ ಉತ್ತರ ಕೊಟ್ಟಿದ್ದರೂ, ಅವನ ಮುಖ ಮೂರನೇ ಬೇಸ್ತು ಸೋತವನ ಹಾಗೆ ಇತ್ತಲ್ಲ?

ಭಜನೆ ಮುಗಿಯುವ ತನಕ, ರಂಗಪ್ಪನ ಮನೆಯನ್ನು ಹೊಕ್ಕಿದ್ದ ಓಂಬಡ್ಸ್‌ಮನ್ ನನ್ನ ಮನಸ್ಸನ್ನು ಸೆರೆ ಹಿಡಿದಿದ್ದ. ಸತಾಯಿಸಿದ. ಕಡೆಗೆ ತೀರ್ಮಾನ ಮಾಡಿದೆ ಭಜನೆ ಮುಗಿದು ಮನೆಗೆ ಹಿಂತಿರುಗುವಾಗ ರಂಗಪ್ಪನ ಜತೆಗೂಡೋದು ಓಂಬಡ್ಸ್‌ಮನ್ ವಿಷಯ ಹೇಳು ಅಂತ ಕೇಳೋದು. ಅದನ್ನು ತಿಳಿದುಕೊಂಡ ಮೇಲೆ ನನ್ನ ಮನೇಗೆ ಹಿಂತಿರುಗೋದು ಇಲ್ಲದೆ ಇದ್ದರೆ ರಾತ್ರಿಯೆಲ್ಲಾ ನಿದ್ದೆ ಬರುಲ್ಲ

ಓಂಬಡ್ಸ್‌ಮನ್ ಕಾಡುತ್ತಾನೆ ಎಂದು ಭಜನೆ ಮುಗಿದ ಮೇಲೆ, ರಂಗಪ್ಪನ ಚಡಾವಿನ ಪಕ್ಕದಲ್ಲೇ ಕಾದು ನಿಂತೆ. ರಂಗಪ್ಪ ಮಂದಿರದಿಂದ ಹೊರಗೆ ಬಂದಾಗ, ಚಡಾವಿಗೆ ಕಾಲು ತೂರಿಸಿದಾಗ ಅವನಿಗೆ ಗಂಟುಬಿದ್ದೆ. ಹೊರಗೆ ಹೋಗುವಾಗ ಕೇಳಿದೆ ಓಂಬಡ್ಸ್‌ಮನ್ ಅಂದರೆ ಯಾವ ಜಾತಿ ಪಿಶಾಚಿ, ಅದು ಹೇಗೆ ನಿನ್ನ ಮನೆ ಹೊಕ್ಕಿತು ಅಂತ

"ಓಂಬಡ್ಸ್‌ಮನ್ ಗೊತ್ತಿಲ್ಲವೇನಯ್ಯಾ? ಮೊನ್ನೆ ತಾನೆ ಪಾರ್ಲಿಮೆಂಟಿನಲ್ಲಿ ನಮ್ಮ ದೇಶದಲ್ಲಿ ಕೂಡ ಒಂದು ಓಂಬಡ್ಸ್‌ಮನ್ ನೇಮಿಸಬೇಕು. ಸರ್ಕಾರಿ ಕೆಲಸಗಳು ಸುಸೂತ್ರವಾಗಿ, ಚಾಕಚಕ್ಯತೆಯಿಂದ, ವಿಳಂಬವಿಲ್ಲದೆ ನಡೆಯಬೇಕಾದರೆ ಓಂಬಡ್ಸ್‌ಮನ್ ಅನ್ನು ನೇಮಿಸಬೇಕು ಅಂತ ಹೇಳಿಕೆ ಕೊಡಲಿಲ್ಲವೇ" ಎಂದು ಶುರುಮಾಡಿದ ರಂಗಪ್ಪ.

"ಎಲ್ಲೋ ಓದಿದ ಜ್ಞಾಪಕ. ಆದರೆ ನೆನಪು ಸರಿಯಾಗಿಲ್ಲ. ನಮ್ಮ ದೇಶದಲ್ಲಿ, ನಮ್ಮ ಸರ್ಕಾರದ ಕೆಲಸ ಸರಿಯಾಗಿ ನಡೆಯಬೇಕಾದರೆ ಓಂಬಡ್ಸ್‌ಮನ್ ಅನ್ನು ಎಲ್ಲಿಂದ ಕರೆಸ್ತಾರೆ. ಯಾವ ದೇಶದಲ್ಲಿ ಆ ಜಾತಿ ಪ್ರಾಣಿ ಸಿಗುತ್ತೆ. ನಮ್ಮ ಸರ್ಕಾರದ ಕೆಲಸಗಾರರು ಹಳೇ ಹೆಗ್ಗಣಗಳು ಪಾಖಡಾ ಆಸಾಮಿಗಳು ದೇವರಿಗೂ ಜಗ್ಗುವ ಆಸಾಮಿಗಳಲ್ಲ. ಅಂತಹವರು ಓಂಬಡ್ಸ್‌ಮನ್‌ಗೆ ಹೆದರ್ತಾರೆಯೇ?" ಎಂದೆ.

"ಏನೇನೂ ತಿಳೀದು ನಿನಗೆ. ಸ್ವೀಡನ್ ನಾರ್ವೆ ದೇಶಗಳಲ್ಲಿ ಸರಕಾರದ ಲೋಪದೇಶಗಳನ್ನು ತತ್‌ಕ್ಷಣ ನಿವಾರಿಸುವುದಕ್ಕೆ ಒಬ್ಬ ಹಿರಿಯ ನಿಷ್ಠಾವಂತ ಅಧಿಕಾರಿಯನ್ನು ನೇಮಿಸುತ್ತಾರೆ. ಅವನೇ ಓಂಬಡ್ಸ್‌ಮನ್. ರಿಟ್ಯಾರ್ ಆದ ಆರು ತಿಂಗಳಿಗೂ ಪೆನ್‌ಷನ್ ಬರದೆ ಇದ್ದರೆ, ಅಂತಹವ ಓಂಬಡ್ಸ್‌ಮನ್‌ಗೆ ವಿಷಯ ತಿಳಿಸ್ತಾನೆ ಓಂಬಡ್ಸ್‌ಮನ್ ಆಗ ಆ ಇಲಾಖೆಗೆ ಹೋಗಿ ಪರಿಶೀಲನೆ ಮಾಡುತ್ತಾನೆ. ಸರ್ಕಾರದ ಯಾವ ಇಲಾಖೆಯಲ್ಲಾಗಲಿ, ಯಾವ ಹಂತದ ಅಧಿಕಾರಿಗೇ ಆಗಲಿ, ಓಂಬಡ್ಸ್‌ಮನ್ ಬಂದ ಅಂದರೆ ಹುಲಿಕನಸು. ಯಾಕೆ ಅಂದರೆ ಓಂಬಡ್ಸ್‌ಮನ್ ಸರ್ಕಾರದಿಂದ ನೇಮಿಸಲ್ಪಟ್ಟಿದ್ದರೂ, ಸರ್ಕಾರದ ಬಿಗಿತಕ್ಕೆ ಸಿಕ್ಕಿದವನಲ್ಲ. ಅವನು ನೇರವಾಗಿ ಪಾರ್ಲಿಮೆಂಟಿಗೆ ಜವಾಬ್ದಾರನಾಗಿರುತ್ತಾನೆ. ಹಾಗಾಗಿ ಅವನು ಸಲಹೆ ಮಾಡಿದರೆ ಅದು ಕಟ್ಟಾಜ್ಞೆಯಂತೆ ಸರಕಾರದಿಂದ ಪಾಲಿಸಲ್ಪಡುತ್ತದೆ. ಆದುದರಿಂದಲೇ ಸರಕಾರದ ಆಡಳಿತ ವರ್ಗಕ್ಕೆ ಓಂಬಡ್ಸ್‌ಮನ್ ಅಂದರೆ ಸಿಂಹ ಸ್ವಪ್ನ. ಜನತೆಗೆ ವರ ಕೊಡುವ ಕಲ್ಪವೃಕ್ಷ.

ನಮ್ಮ ಸರಕಾರದವರೂ ಕೂಡ ಓಂಬಡ್ಸ್‌ಮನ್ ನೇಮಿಸಬೇಕು. ಆಗ ಸರ್ಕಾರದ ಕೆಲಸ ಚೆಂದವಾಗುತ್ತೆ. ಅಂದ ಮೇಲೆ ಭ್ರಷ್ಟಾಚಾರಕ್ಕೆ ಕಲ್ಲುಹಾಕಿದ ಹಾಗೆ ಆಗುತ್ತೆ ಅಂತ ಯೋಚಿಸ್ತಿದಾರೆ" ಎಂದು ರಂಗಪ್ಪ ವಿವರಣೆ ಕೊಟ್ಟ.

ಅವನು ಹೇಳಿದ ರೀತಿ ಸ್ವಾರಸ್ಯವಾಗಿತ್ತಾದ್ದರಿಂದ ಕಿವಿಗೊಟ್ಟು, ಮನನೆಟ್ಟು ಕೇಳು ತ್ತಿದ್ದೆ. ವಿಷಯ ತಿಳಿದ ಮೇಲೆ ಏನೋ ಒಂದು ರೀತಿಯ ಮಂಕು ಮನಸ್ಸನ್ನು ಮೆಟ್ಟಿಕೊಂಡಿತು. ಹಿತವಾದ ಮಂಕುತನ. ಆದರೆ ಮನಸ್ಸು ಮಂಗ ಅಲ್ಲವೇ? ಅರೆಕ್ಷಣದಲ್ಲಿ ಬಾಲ ಆಡಿಸಿತು. "ಅಲ್ಲವೋ? ಓಂಬಡ್ಸ್‌ಮನ್ ವಿಷಯ ತಿಳಿದು ಕೊಂಡೆ. ದಿಟ. ಆದರೆ ಅವನ ಹೆಸರಾದರೂ ಯಾಕೆ ನಿನಗೆ ತೋಚಿತು?" ಎಂದು ಮನಸ್ಸು ಕೊಕ್ಕೆ ಹಾಕಿತು.

ರಂಗಪ್ಪನೇ ಹೇಳಿದ್ದು. ಓಂಬಡ್ಸ್‌ಮನ್ ನಮ್ಮ ಮನೆ ಹೊಕ್ಕಿದೆ ಅಂತ. ಆದರಿಂದಲೇ ಈ ಮಾತು ಶುರುವಾಗಿದ್ದು. ಸರ್ಕಾರ ತನ್ನ ನಿಷ್ಠಾವಂತ ಕಾರ್ಯ ಕ್ರಮ ಸಾಧನೆಗೆ ಓಂಬಡ್ಸ್‌ಮನ್ ನೇಮಿಸಿಕೊಂಡರೆ, ರಂಗಪ್ಪನಿಗೆ ಏನು ಕಷ್ಟ? ಅವನ ಮನೆಗೆ ಓಂಬಡ್ಸ್‌ಮನ್ ಯಾಕಾರೂ ಹೋಗ್ತಾನೆ? ಹೋಗಿ ಅಲ್ಲೀ ಹೊಕ್ಕಿ ಕೊಳ್ಳುತ್ತೆ? ರಂಗಪ್ಪ ಸರ್ಕಾರಿ ನೌಕರ ಅಲ್ಲ. ಆಡಳಿತ ಪಕ್ಷದ ಪುಢಾರಿಯಲ್ಲ. ಸರ್ಕಾರಿ ಕಂಟ್ರಾಕ್ಟ್ ಹಿಡಿದಿಲ್ಲ. ಪೂರ್ವಪುಣ್ಯದಿಂದ ಶ್ರೀಮಂತನ ಒಬ್ಬಳೇ ಮಗಳನ್ನು ಮದುವೆಯಾಗಿದ್ದ. ಅಪ್ಪ ಬಿಟ್ಟ ಆಸ್ತಿ ಪಾಸ್ತಿಯಲ್ಲಿ ಸುಖಜೀವನ ನಡೆಸಿಕೊಂಡು ನಗ್ತಾ ನಗ್ತಾ ಬಾಳುತ್ತಿದ್ದ. ಇಂತಹವನ ಮನೆಗೆ ಓಂಬಡ್ಸ್‌ಮನ್ ಯಾಕೆ ಬಂದು ಸೇರಿಕೊಂಡಿದ್ದಾನೆ? ಸರ್ಕಾರವೇ ಇನ್ನೂ ಅಂತಹವನನ್ನು ನೇಮಿ ಸಿಲ್ಲ! ಎಂದೆಲ್ಲಾ ವಿಚಾರ ಸರಣಿ ಮನಸ್ಸಿನಲ್ಲಿ ಗೊಂಚಲು ಗೊಂಚಲಾಗಿ ಹಾದು ಹೋಯಿತು.

ಆದಕ್ಕೇ ತಿರುಗಿ ಕೇಳಿದೆ:—

"ರೋಫಿನ ರಂಗಪ್ಪ ಅಂತ ಜನ ನಿನ್ನ ಕರೆಯೋದು ಈಗ ಅರ್ಥವಾಯ್ತು ಕಣಪ್ಪಾ! ದಿಳ್ಳೀಲಿ ಹೋಗೋ ಮಾರೀಯ ವಿಷಯ ಮಾತಾಡ್ಬಿಟ್ಟು, ಅದ ನಮ್ಮನೆ ಹೊಕ್ಕಿದೆ ಅಂತ ಹೇಳ್ಬಿಟ್ಟು, ಅದು ಹೇಗೆ ಹೊಕ್ಕಿತು ಅಂತ ಹೇಳಲೇ ಇಲ್ಲ ವಲ್ಲ!" ಎಂದೆ.

"ಅದನ್ನು ಕೇಳಿದೆಯಾ ನೀನು? ಉತ್ತರಿಸ್ತೀನಿ, ಕೇಳು. ನಿನಗೆ ತಿಳಿದ ಹಾಗೆ ಆರಾಮ ಜೀವನ ಮಾಡ್ತಾ ಇದೀನಿ. ಬೆಳಿಗ್ಗೆ ಎಚ್ಚರವಾದ ಮೇಲೆ ಹಾಸಿಗೆ ಮೇಲೆ ಹಾಯಾಗಿ ಹೊರಳಾಡ್ತಾ ಬಿದ್ದಿರ್ತೀನಿ. ಸಾವಧಾನವಾಗಿ ಎದ್ದು ಮುಖ ಕ್ಷೌರ ಮಾಡಿಕೋತೀನಿ. ಬಿಸಿ ಬಿಸಿ ಸ್ನಾನ ಮಾಡ್ತೀನಿ. ಗಡದ್ದು ತಿಂಡೀನ ಬಿಸಿ ಬಿಸಿ ತಿಂತೀನಿ. ನಂತರ ಗ್ರಾಮ ಪ್ರದಕ್ಷಿಣೆಗೆ ಹೊರಡ್ತೀನಿ ಅಲ್ಲಲ್ಲೆ ಕಾಡ ಹರಟೆ ಹೊಡೆದು. ವಾಚನಾಲಯಕ್ಕೆ ಹೋಗಿ ಚಾಡಿ ಸುದ್ದಿಗಳನ್ನೆಲ್ಲ ಬಿತ್ತರಿಸಿ ಮನೆಗೆ ಹನ್ನೆರಡರ ಹೊತ್ತಿಗೆ ಹಿಂತಿರುಗುತ್ತೀನಿ. ಪುಷ್ಕಳ ಭೋಜನ, ನಂತರ ಹಿತವಾದ ಗೊರಕೆ. ಮಧ್ಯಾಹ್ನ ಕಾಫಿ, ತಿರಿ ತಿಂಡಿ, ಸಂಜೆ ತಿರುಗಿ ಗಾಳಿ

ಸವಾರಿ. ಇಸ್ಪೀಟು, ಕಚೇರಿ, ಸಂಗೀತ, ಜಲಸಾ ರಾತ್ರಿ ಉಂಡು ಮಲಗೋತನಕ ಹೀಗೆ ಕಾಲ ಕಳೆಯುವ ಕಾರ್ಯಕ್ರಮ.

ಎಂಟು ವರ್ಷದಿಂದ ಹೀಗೆ ದೇವರಿಗೆ ಬಿಟ್ಟ ಗೂಳಿ ಹಾಗೆ ಅಡ್ಡಾಡಿಕೊಂಡು. ಚೆಂದ ಕಂಡಿದ್ದನ್ನು ಮೇದು, ಹೆದರಿದವರನ್ನು ಕಂಡರೆ ಗುಟುರು ಹಾಕುತ್ತಾ ಬಾಳಿ ಕೊಂಡಿದ್ದೆ. ಮನೆಯವಳಿಗೆ ಮನೆ ಹೊರಗೆ ಆಗುವುದು ತಿಳಿಯದು ಅಂದಮೇಲೆ ನನ್ನ ಸುಖಕ್ಕೆ ಎಲ್ಲಿಯುಂಟು?

ಆದರೆ ನೋಡಪ್ಪಾ! ಈಗ ನಮ್ಮ ಮನೇಲಿ ಓಂಬಡ್ಸ್‌ಮನ್ ಬಂದು ಸೇರಿ ಕೊಂಡು ಬಿಟ್ಟಿದ್ದಾನೆ. ಮನೆ ಹೊರಗೆ ಏನು ನಡೆದರೂ, ಮನೆ ಒಳಕ್ಕೆ ಸುದ್ದಿ ವರದಿಯಾಗಿ ಬಿಡುತ್ತೆ. ನಡೆದಿದ್ದು ವರದಿಯಾದರೂ ಪರವಾಗಿಲ್ಲ. ನಡೆಯಬಹು ದಾದುದೂ ವರದಿಯಾಗುತ್ತೆ. ಹಾಗಾಗಿ ಹಣಾ ಹಣಿ"

ಎಂದು ನಿಟ್ಟುಸಿರನ್ನು ಎಳೆದ.

"ಒದ್ದು ಕಳಿಸಿಬಿಡು ಅವನನ್ನ. ಮನೆಗೆ ಸೇರಿಸಬೇಡ. ನಿನ್ನ ಮನೆ ಅಲ್ಲವೇ?" ಎಂದು ಸಲಹೆ ಮಾಡಿದೆ.

ಅಷ್ಟು ಸುಲಭವಲ್ಲಪ್ಪಾ, ಅದು. ನಿನ್ನೆ ನೋಡು ಬೆಳಗ್ಗೆ ವಾಕಿಂಗ್ ಹೊರಟೆ. ಕಾಲೇಜಿನ ತನಕ ನಾನೂ ಬರ್ತೀನಿ ಅಂತ ಅವನೂ ನನ್ನ ಜತೆ ಬಂದ. ಅವನೆದು ರಿಗೆ ಚಾಡಿ ಸುದ್ದಿಗಳನ್ನು ಹೇಗೆ ಬಿತ್ತರಿಸೋದು? ಬಾಯಿಮುಚ್ಚಿಕೊಂಡು ಮೌನ ವ್ರತ ಆಚರಿಸಬೇಕಾಯ್ತು. ಅಷ್ಟು ಹೊತ್ತಿಗೆ ನಾಲಿಗೆ ವ್ಯಾಯಾಮವಿಲ್ಲದೆ, ಬೂಡ್ಸಿನ ನಾಲಿಗೆ ತರಹ ಒರಟು ಒರಟಾಗಿ ಅಂಗಳಕ್ಕೆ ಅಂಟಿಕೊಂಡುಬಿಡ್ತು. ಅದಕ್ಕೆ ಸರಿ ಯಾದ ಮದ್ದು ಸೇವಿಸುವುದಕ್ಕೆ ಕ್ಲಬ್ಬಿಗೆ ಹೋಗಬೇಕಾಯಿತು. ಆ ಮೇಲೆ ಆಗುವ ಅನಾಹುತ ಗೊತ್ತಲ್ಲ!

ಮೊನ್ನೆ ವಾಚನಾಲಯದಲ್ಲಿ 'ನವ್ಯ ಫಿಲ್ಮೀ' ಪತ್ರಿಕೆಯ ಚಿತ್ರಗಳನ್ನು ನೋಡು ತ್ತಿದ್ದೆ. ಮೆಲ್ಲಗೆ ಹಿಂದಿನಿಂದ ಯಾರೋ ಬಂದು ಬೆನ್ನ ತಟ್ಟಿದರು ಹಿಂತಿರುಗಿದೆ. ರಾಜೂಟಿ ನಿಂತಿದ್ದ. ಏನಪ್ಪಾ ಅಂದೆ. ನಿಮ್ಮ ಹತ್ತಿರ ತುರ್ತು ಮಾತನಾಡ ಬೇಕಿತ್ತು. ಐದು ನಿಮಿಷ ಹೊರಗೆ ಬರ್ತೀರಾ ಅಂದ.

"ರಾಜೂಟಿ ಯಾರೋ?" ಎಂದೆ.

"ರಾಜೂಟಿ ಗೊತ್ತಿಲ್ಲವೇನೋ? ಊರ ರಸಿಕರಿಗೆಲ್ಲಾ ಹೆಸರಾಂತ ಭಾವ ಮೈದ!" ವರಾಂಡಾಕ್ಕೆ ಎದ್ದು ಹೋದೆ. ರಾಜೂಟಿಯ ಸಮಸ್ಯೆಯನ್ನು ಕೇಳಿದೆ. ಅವನು ಹನ್ನೆರಡು ಸಾವಿರ ರೂಪಾಯಿ ಶೇಖರಿಸಿದ್ದನಂತೆ. ಮನೆ ಸೈಟ್ ತೆಗೆದು ಕೊಳ್ಳಬೇಕು ಅಂತ ಅವನ ಆಸೆ ಆದರೆ ಹಾಗೆ ಕೊಂಡುಕೊಂಡರೆ; ನಿನಗೆ ಅಷ್ಟು ಹಣ ಎಲ್ಲಿ ಸಿಕ್ಕಿತು? ಅಂತ ತೆರಿಗೆ ಇಲಾಖೆಯವರು ಗಲಾಟೆ ಎಬ್ಬಿಸುತ್ತಾರೇನೋ ಅಂತ ಭಯ. ಇದನ್ನು ಹೇಗೆ ಮಾಡಲಿ ಎಂದು ಸಲಹೆ ಕೇಳಿದ. ನಿನ್ನ ತಂಗಿ

ಹೆಸರಿನಲ್ಲಿ ಕೊಂಡುಕೊ ಎಂದೆ. "ಸ್ಸರ್ರಿ ಆ ಮೇಲೆ ತಂಗಿ ಜತೆಗೆ ಮನೆ ಸೈಟೂ ಓಡಿ ಹೋಗುತ್ತೆ" ಎಂದ. ಹನ್ನೆರಡು ಸಾವಿರ ರೂಪಾಯಿ ಕೊಟ್ಟು, ಸಾವಿರ ರೂಪಾಯಿಗೆ ಕ್ರಯಪತ್ರ ಬರೆಸು ಎಂದೆ. ತುಂಬಾ ವಂದನೆಗಳನ್ನು ಮಾಡಿ ಅವ ಹೊರಟುಹೋದ

ಆ ಸಂಜೆ ಮನೆಗೆ ಹಿಂತಿರುಗಿದಾಗ ನನ್ನಾಕೆಯ ಅರ್ಭಟ ಹೇಳತೀರದು. ಮನೆಗೆ ಹಿಂತಿರುಗಿದಾಗ ಸಚೇಲ ಸ್ನಾನ ಮಾಡಿಸಿದಳು ಯಾರೋ ತೀರಿಕೊಂಡಿರಬಹುದು ಒಂದು ಸ್ನಾನದವರು ಎಂದುಕೊಂಡೆ ಮೊದಲು ಮೊದಲು. ಆಮೇಲೆ ಮೆಲ್ಲಗೆ ಕೇಳಿದೆ. ಸ್ನಾನ ಯಾಕೆ ಮಾಡಿಸಿದೆ. ನಿಮ್ಮ ಕಡೆಯೋರೋ ನನ್ನ ಕಡೆಯೋರೋ, ಯಾರು? ಎಂದು. ಯಾರಾದರೂ ತೀರಿಕೊಂಡರೆ ಸೂತಕ ಸ್ನಾನ ಮಾಡಿಸಬೇಕಾದರೆ, ನಾನೂ ಮಾಡಬೇಕಲ್ಲ ನಾನೇನಾದರೂ ತುದಿಗಂಟು ಹಾಕ್ಕೊಂಡಿದ್ದೇನೆಯೇ? ವಯಸ್ಸಾಗ್ತಾ ಆಗ್ತಾ ನಿಮ್ಮ ಬುದ್ಧಿ ನಿಮ್ಮ ಚಾಳಿ ಎಲ್ಲಾ ನಾಯಿ ಬಾಲ ಆಯಿತು. ಆ ಹಾಳು ರಾಜೂಟಿ ಜತೆ ನಿಮ್ಮದೇನು ಚಕ್ಕಂದ? ಮನೆಯಾದರೂ ಶುಚಿಯಾಗಿರಲಿ ಅಂತ ನಿಮಗೆ ಸಚೇಲ ಸ್ನಾನ ಮಾಡಿಸಿ ಆಮೇಲೆ ಮನೇಲಿ ಕಾಲಿಡಿಸಿದೆ.

"ರಾಜೂಟಿ ಜತೇಲಿ ಮಾತನಾಡಿದ್ದು ನಿನ್ನ ಹೆಂಡತಿಗೆ ಹ್ಯಾಗೆ ಗೊತ್ತಾಯಿತು?"

"ಅದೇ ಓಂಬಡ್ಸ್‌ಮನ್! ಕಾಲೇಜಿಗೆ ಹೋಗುತ್ತಿದ್ದಾಗ ವಾಚನಾಲಯದ ವರಾಂಡದಲ್ಲಿ ರಾಜೂಟಿ ನನ್ನ ಹತ್ತಿರ ಮಾತನಾಡುತ್ತಿದ್ದುದನ್ನು ನೋಡಿದನಂತೆ ಮನೆಗೆ ಹೋಗಿ ಬಣ್ಣ ಕಟ್ಟಿ ವರದಿ ಒಪ್ಪಿಸಿದ, ಅವರ ಅಕ್ಕನಿಗೆ.

"ಅಂದರೆ ನಿಮ್ಮನೆ ಹೊಕ್ಕಿರುವ, ನಿನ್ನ ಸುಖಬಾಳಿಗೆ ಕಂಟಕನಾಗಿರುವ ಓಂಬಡ್ಸ್‌ಮನ್, ನಿನ್ನ ಭಾವಮೈದ ಅನ್ನು" ಎಂದೆ.

"ಹೂಕಣಪ್ಪಾ! ಎಸ್ ಎಸ್ ಸಿ ಪ್ಯಾಸಾಯಿತು. ಕಾಲೇಜಿಗೆ ಸೇರಿಕೊಳ್ಳುಕ್ಕೆ ಅಂತ ನಮ್ಮೂರಿಗೆ ಬಂದ. ನಮ್ಮನೆ ಹೊಕ್ಕಿದ್ದಾನೆ. ಕೂತರೆ, ಸೀತರೆ ಸುದ್ದಿ ತಿಳಿಸ್ತಾನೆ ಮನೇಲಿ! ಸ್ವಲ್ಪ ಕಾಳಜಿ ಆಗಿದೆ. ಒಂದೆರಡು ತಿಂಗಳಲ್ಲಿ ಅವನನ್ನು ದಾರೀಗೆ ತರ್ತೀನಿ. ಸರಿಮಾಡಿಕೋತೀನಿ ಆ ತನಕ ಸ್ವಲ್ಪ ಫಿಕರಿ" ಎಂದ ರಂಗಪ್ಪ.

ಅಷ್ಟು ಹೊತ್ತಿಗೆ ಅವನ ಮನೆ ಸಿಕ್ಕಿತು. ಓಂಬಡ್ಸ್‌ಮನ್ ಮತ್ತು ಅವನ ಅಕ್ಕ ಇಬ್ಬರೂ ಗೇಟಿನ ಹತ್ತಿರವೇ ನಿಂತಿದ್ದರು.

ಮಾತಿನ ಮುನ್ನ

" ತಾತಾ, ! ತಾತಾ !! "

" ಏನಪ್ಪಾ "

" ಇವತ್ತು ಎಲ್ಲ್ರೂ ಮನೇಲಿದಾರೆ. "

" ಯಾಕೆ ಕಾಲೇಜಿಗೆ ಹೋಗಲಿಲ್ಲವೇ ? "

" ಇಲ್ಲ ತಾತ. ಸ್ಟ್ರೈಕ್ ಮಾಡಿದ್ದಾರೆ "

" ಆದ್ಯಾಕೆ ಹಾಗೆ ಮಾಡಿದರು. "

" ಹೆಚ್ಚು ಫೀಜು ಕೊಡಿ ಅಂತ ಕೇಳಿದ್ರಂತೆ, ಅದಕ್ಕೆ ಸ್ಟ್ರೈಕ್ ಮಾಡಿದ್ರು "

" ಕಾಲೇಜಿನಲ್ಲಿ ಪಾಠ ಓದುಲ್ಲ ತಾತ, ಮನೇಲೇ ಓದ್ಕೋತಾರೆ "

" ಮತ್ತೆ ಕಾಲೇಜಿಗೆ ಯಾಕೆ ಹೋಗ್ತಾರೆ "

" ಪರೀಕ್ಷೆ ಪ್ಯಾಸು ಮಾಡುಕ್ಕೆ ತಾತ. "

" ಸ್ಟ್ರೈಕು ಮಾಡಿದರೆ ಪರೀಕ್ಷೆಗೆ ಕೂರ್ಸಲ್ವಲ್ಲಪ್ಪಾ "

" ಕೂರ್ಸಿ ಅಂತ ಸ್ಟ್ರೈಕ್ ಮಾಡ್ತಾರೆ, ತಾತ. "

" ಆವಾಗ ಹೆಚ್ಚು ಫೀಜು ಕೊಡಿ ಅಂತಾರೆ, ಆವಾಗೇನ್ಮಾಡ್ತಾರೆ ?"

" ಆವಾಗ ನೀವು ಕೊಟ್ಬಿಡಿ ತಾತ "

" ಅಲ್ಲ ಕಣೋ ಕಾಲೇಜಿನಲ್ಲಿರೋರ ಫೀಜನ್ನೆಲ್ಲಾ ನಾನು ಕೊಡಲೇನೋ"

" ಕೊಡಿ ತಾತ, ಆಗ ಎಲ್ಲ್ರೂ ಪ್ಯಾಸ್ ಮಾಡ್ತಾರೆ. "

" ಆಗಲಪ್ಪಾ, ಕೊಡ್ತೀನಿ. ಆದರೆ, ನೀನೊಂದು ಕೆಲಸ ಮಾಡಬೇಕು.

" ಏನು ಹೇಳಿ, ತಾತ, ಮಾಡ್ತೀನಿ "

" ನನ್ನನ್ನ ಮುಖ್ಯ ಮಂತ್ರಿ ಅಂತ ಮಾಡಿಸಿಬಿಡು. ಎಲ್ಲ ಕಾಲೇಜಿನ ಎಲ್ಲಾ ಹುಡುಗರನ್ನೂ ಹುಡುಗಿಯರನ್ನೂ ಓದಿಸ್ತೀನಿ."

" ಹ್ಹ ಹ್ಹ ಹ್ಹ. ನೀವು ಹ್ಯಾಗೆ ಮುಖ್ಯ ಮಂತ್ರಿ ಆಗ್ತೀರಿ, ತಾತ "

" ಯಾಕಪ್ಪ ಆಗಬಾರದು," ನೀ ಮಾಡಿಸಿದರೆ "

" ನಾ ಮಾಡಿಸಿದೆ ಅಂತ ಇಟ್ಕೊಳ್ಳಿ. ನೀವಾದಿರಿ ಅಂತ ಇಟ್ಕೊಳ್ಳಿ ಆಗ ಎಲ್ಲರಿಗೂ ಫೀಸು ಕೊಡಿಸಿಬಿಡ್ತೀರಿ ಆಗ ಸ್ಟ್ರೈಕೇ ಇಲ್ವಲ್ಲಾ ಸ್ಟ್ರೈಕ್ ಮಾಡಿಸದೇ ಇದ್ದರೇ ಮುಖ್ಯ ಮಂತ್ರಿ ಆಗುಕ್ಕಾಗುಲ್ವಲ್ಲಾ !

ಹಾದಪ್ಪಾ ! ಅದಕ್ಕೇ ನಾನು ಆಗಲಿಲ್ಲ.

ಭೂತದ ಮನೆ

ವಿರಾಟಭವನದಲ್ಲಿ ಅಂದು ನಮ್ಮ ಮಾಮೂಲು ಕೋಣೆಯಲ್ಲಿ ಮಲ್ಹಾರಿ ರಾಯರೇ ತಮ್ಮ ಮಾಮೂಲ ಕುರ್ಚಿಯಲ್ಲಿ ಕುಳಿತಿದ್ದರು. ಖಾರದ ಗೋಡಂಬಿ ಅಗಿಯುತ್ತಾ ಕುಳಿತಿದ್ದರು. ನಾನೂ ಒಳಗೆ ನುಗ್ಗಿ, ಅಲೂಗಡ್ಡೆ ಉಪ್ಪೇರಿಗಾಗಿ ಪರಶುವನ್ನು ಒಳಗಟ್ಟಿದೆ. ಮಲ್ಹಾರಿ ರಾಯರು ನನ್ನ ಕಡೆ ತಿರುಗಿದರು.

"ನೀವು ಭೂತಗಳನ್ನು ನಂಬುತ್ತೀರಾ?" ಅಂತ ಕೇಳಿದರು.

ನಾನು ಒಂದು ಕ್ಷಣ ಕಕ್ಕಾಬಿಕ್ಕಿಯಾದೆ. ಕೂಡಲೇ ಚೇತರಿಸಿಕೊಂಡು ಬುದ್ಧಿವಂತಿಕೆಯಿಂದ ಹೇಳಿದೆ.

"ನನಗೆ ತಿಳಿದಹಾಗೆ ಬೂತುಗಳಿಂದ ಪ್ರಜಾಪ್ರಭುತ್ವಕ್ಕೆ ಅನುಕೂಲವೇ ಅನ್ನ ಬೇಕು. ಈಗಿನ ಪರಿಸ್ಥಿತಿಯಲ್ಲಿ ಜನ ಮತಗಣನೆಗೆ ಅದಕ್ಕಿಂತಲೂ ಒಳ್ಳೆಯ ವ್ಯವಸ್ಥೆಯೇ ಇಲ್ಲ. ಆದ್ದರಿಂದ ನಂಬಲೇಬೇಕು."

"ನಾನು ನಿಮಗೆ ಕೇಳಿದ್ದು—ಭೂತಗಳ ಬಗ್ಗೆ. ವೋಟಿನ ಬೂತುಗಳ ಬಗ್ಗೆ ಅಲ್ಲ."

ಈಗ ಪೇಚಿನಲ್ಲಿ ಸಿಕ್ಕಿಕೊಂಡೆ. ನನಗೆ ಭೂತ, ದೆವ್ವ, ಭೇತಾಳಗಳ ಬಗ್ಗೆ ಖಚಿತವಾಗಿ ಏನೂ ತಿಳಿಯದು ಆದರೂ ಎಚ್ಚರಿಕೆಯಿಂದ ಹೇಳಿದೆ—

"ನಂಬಿಕೆ ಉಂಟು ಮತ್ತು ಇಲ್ಲ."

ಮಲ್ಹಾರಿರಾಯರಿಗೆ ನನ್ನ ಮನೋಧರ್ಮದ ಬಗ್ಗೆ ಅಪನಂಬಿಕೆ ಬಂದಿರಬೇಕು.

"ಮಸಲ ಒಂದು ಖಾಲಿ ಮನೆಯಲ್ಲಿ, ಅದರ ಹಿಂದಿನ ಮಾಲೀಕ ಅಥವಾ ಮಾಲೀಕಳು, ಭೂತವಾಗಿ ವಾಸವಾಗಿದ್ದಾನೆ ಅಥವಾ ವಾಸವಾಗಿದ್ದಾಳೆ ಅಂತ ನಿಮಗೆ ಸಮಾಚಾರ ತಿಳಿದರೆ, ನೀವು ನಂಬುತ್ತೀರಾ?" ಅಂದರು.

"ಹೌದು ಮತ್ತು ಇಲ್ಲ." ಅಂದೆ ಎಚ್ಚರಿಕೆಯಿಂದ ಮಲ್ಹಾರಿರಾಯರು ನನ್ನ ಉತ್ತರದಿಂದ ನಿರಾಶರಾದರು. ಪ್ರಾಯಶಃ ನನ್ನ ವಿದ್ಯಾಭ್ಯಾಸ ರಷ್ಯಾದಲ್ಲೋ, ಚೀನಾದಲ್ಲೋ ಆಗಿರಬೇಕೆಂದು ಅನುಮಾನಿಸಿದ್ದರೂ ಇರಬಹುದು. ಪರಶುಗೆ ಒಂದು ಸ್ಟ್ರಾಂಗ್ ಕಾಫಿ ತರಹೇಳಿದರು.

" ಪ್ರಾಯಶಃ ನನ್ನ ಪ್ರಶ್ನೆ ನಿಮಗೆ ಸರಿಯಾಗಿ ಅರ್ಥವಾಗಿಲ್ಲ. ನನ್ನ ದೊಡ್ಡ ಮೈದುನ ಕೋದಂಡರಾಯನ ವಿಷಯ ಕೇಳಿದರೆ ಆಗ ನನ್ನ ಪ್ರಶ್ನೆ ನಿಮಗರ್ಥವಾದೀತು. ನನ್ನ ದೊಡ್ಡ ಮೈದುನ ಕೋದಂಡ...."

" ಕ್ಷಮಿಸಿ, ಈಗ ನಾನು ಜರೂರು ಕೆಲಸ...."

ನನ್ನ ದೊಡ್ಡ ಮೈದುನ ಕೋದಂಡರಾಯ ಅಂದರೆ (ಮಲ್ಹಾರಿರಾಯರು ಮುಂದುವರಿಸಿದರು). ಏಕಾಂಬರ ಅಂದರೆ ಉಜ್ವಲ ಕುಮಾರನ ದೊಡ್ಡಪ್ಪ. ನೀವು ಪತ್ತೇದಾರಿ ಕಾದಂಬರಿಗಳ ಆರಾಧಕರಾಗಿದ್ದರೆ, ನಮ್ಮ ಕೋದಂಡರಾಯನ ಹೆಸರು ನಿಮಗೆ ತಿಳಿಯದೇ ಇರದು. ಪತ್ತೇದಾರಿ ಸಿದ್ಧರಾಮಣ್ಣ, ಬಾಡೀಗಾರ್ಡ್ ಗುಲ್ಡ್–ಮಿಯಾನ್ ಇವರುಗಳ ನಿರ್ಮಾತ ಪತ್ತೇದಾರೀ ಕಾದಂಬರಿಕಾರರಲ್ಲೆಲ್ಲಾ, ಶುದ್ಧ ಪತ್ತೇದಾರೀ ಕಾದಂಬರಿಕಾರನೆಂದರೆ ತಾನೇ ಅಂತ ಕೋದಂಡನ ಮತ. ಏಕೆಂದರೆ ಅವನ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರವೇ ಇಲ್ಲ. ಅಂದರೆ ಜೀವಂತವಾಗಿ ಯಾವ ಸ್ತ್ರೀ ಪಾತ್ರವೂ ಇಲ್ಲ. ಬೇಕಾದಷ್ಟು ಸ್ತ್ರೀ ಪ್ರೇತಗಳ ಬಗ್ಗೆ ಅವನ ಕಾದಂಬರಿಗಳಲ್ಲಿ ವಿಚಾರ ಬಂದಿದೆ. ಆದರೆ ಸ್ತ್ರೀ ಪಾತ್ರಕ್ಕೆ ಅಂಟಿಕೊಳ್ಳುವ ಪ್ರೇಮ, ವ್ಯಾಮೋಹ, ಅಸೂಯೆ, ದ್ವೇಷ ಇವುಗಳಿಗೆ ಅವನ ಕಾದಂಬರಿಗಳಲ್ಲಿ ಸ್ಥಾನವೇ ಇಲ್ಲ. ನಿಜವಾದ ಪತ್ತೇದಾರ ಇಂತಹ ಯಾವ ಬಂಧನಗಳಿಗೂ ಒಳಗಾಗಬಾರದೆಂದೇ ಕೋದಂಡನ ಉದ್ದೇಶ. ಅದನ್ನು ಅವನ ಕಾದಂಬರಿಗಳೆಲ್ಲದರಲ್ಲೂ ಸಾಧಿಸಿಕೊಂಡು ಬಂದಿದ್ದಾನೆ

ಕೋದಂಡರಾಯ ಅವನ ದೊಡ್ಡಮ್ಮ ಅಂದರೆ ತಾಯಿಯ ಅಕ್ಕನಿಗೆ ದತ್ತು. ದೊಡ್ಡಮ್ಮ ಬೇರೆ ಯಾರಲ್ಲ ಸುಪ್ರಸಿದ್ಧ ಬರಹಗಾರ್ತಿ ದೊಡ್ಡಮನೆ ಶ್ರೀರಂಗಮ್ಮನವರು! ಶ್ರೀರಂಗಮ್ಮ ಹಿಂದಿನ ಕಾಲದಲ್ಲಿ F.A. ಪಾಸು ಮಾಡಿ, ಚಿಕ್ಕ ವಯಸ್ಸಿನಲ್ಲೇ ಪಾಪ ವೈಧವ್ಯ ಅನುಭವಿಸಿ, ವಿದ್ಯಾ ಇಲಾಖೆಯಲ್ಲಿ ಕೆಲಸಮಾಡಿ, ಬಿಡುವಿನಲ್ಲಿ ಕಾದಂಬರಿಗಳನ್ನು ಬರೆಯುತ್ತಿದ್ದರು. ಆಕೆಯ ಕಾದಂಬರಿಗಳೆಲ್ಲಾ ಮುಕ್ಕಾಲು ಪಾಲು ಪ್ರೇಮಕ್ಕೆ ಸಂಬಂಧಪಟ್ಟವೇ. ಹಾಗೂ ದುರಂತ ಕಥೆಗಳು. ಪ್ರಾಯಶಃ ತಮ್ಮ ಸ್ವಂತ ದುರಂತ ಜೀವನದಿಂದ ಶ್ರೀರಂಗಮ್ಮನ ದೃಷ್ಟಿ ಕೋಣವೇ ಬದಲಾಯಿಸಿತ್ತು ಅಂತ ಕಾಣುತ್ತೆ ಒಟ್ಟಿನಲ್ಲಿ ಹೇಳೋದಾದರೆ ಶ್ರೀರಂಗಮ್ಮನ ಕಾದಂಬರಿಗಳಿಗೂ, ಅವರ ದತ್ತು ಪುತ್ರ ಕೋದಂಡನ ಕಾದಂಬರಿಗಳಿಗೂ ಅಜಗಜಾಂತರ! ತದ್ವಿರುದ್ಧ! ಹಾಗಾಗಿ ದೊಡ್ಡಮ್ಮನಿಗೂ, ದತ್ತು ಮಗನಿಗೂ ಆಗಾಗ ವಾಗ್ವಾದ ನಡೆಯುತ್ತಲೇ ಇತ್ತು. ಅದರೂ ಶ್ರೀರಂಗಮ್ಮ ತನ್ನ ಆಸ್ತಿಯನ್ನೆಲ್ಲಾ ಕೋದಂಡನಿಗೇ ಬಿಟ್ಟು ಹೋದರು.

ಕೋದಂಡ ತನ್ನ ಖಾತೆಗೆ ಬಂದ ಶೀರೂರು ದೊಡ್ಡಮನೆಗೆ ತನ್ನ ಪತ್ತೇದಾರಿ ಕಾದಂಬರಿ ಆಸ್ತಿಪಾಸ್ತಿಗಳನ್ನೆಲ್ಲಾ ಒಯ್ದು ವಾಸ ಮಾಡಲಾರಂಭಿಸಿದ. ಹೆಸರಿಗೆ

ತಕ್ಕ ಹಾಗೆ ಶ್ರೀರಂಗಮ್ಮನವರ ದೊಡ್ಡ ಮನೆ ವಿಪರೀತ ದೊಡ್ಡ ಮನೆ. ಪಟ್ಟಣಕ್ಕೆ ಸುಮಾರು ಹದಿನೈದು ಮೈಲಿ ದೂರದಲ್ಲಿ, ಶ್ರೀರಂಗಮ್ಮನ ಮಾವನವರು ಹಿಂದಿನ ಕಾಲದಲ್ಲಿ ಕಟ್ಟಿಸಿದ ಛತ್ರದಂಥಾ ಮನೆ. ಕೋದಂಡ ಆ ಮನೆಗೆ ವಾಸ ಮಾಡಲು ಹೋದಾಗ, ಅಲ್ಲಿದ್ದವರು ದೊಡ್ಡಮನೆ ಆಳು ಲಕ್ಕ, ಅವನ ಹೆಂಡತಿ ಲಕ್ಕಿ ಮತ್ತು ಒಂದು ಬಡಕಲು ನಾಯಿ ಅದಕ್ಕೆ "ಶೂರಾ" ಅಂತ ಕರೆಯುತ್ತಿದ್ದರಂತೆ. ಕೋದಂಡ ದೊಡ್ಡ ಮನೆಯನ್ನು ಅಷ್ಟಾಗಿ ಹೆಚ್ಚಿನ ಭ್ರಮೆಯಿಂದ ಪ್ರವೇಶಿಸಲಿಲ್ಲ. ಏಕೆಂದರೆ ಅಲ್ಲಿ ಶ್ರೀರಂಗಮ್ಮ ಭೂತವಾಗಿ ಅಲ್ಲಲ್ಲಿ ಓಡಾಡಿದ್ದು ಜನರ ಕಣ್ಣಿಗೆ ಬಿದ್ದಿದೆ ಅಂತ ವದಂತಿ ಇತ್ತು. ಅಷ್ಟೇ ಅಲ್ಲದೆ, ಶ್ರೀರಂಗಮ್ಮ ತನ್ನ ಕಾದಂಬರಿಗಳಲ್ಲಿ ನಿರ್ಮಿಸಿದ್ದ ಪ್ರೇಮಿಗಳ ಭೂತಗಳು ಕೂಡ ದೊಡ್ಡ ಮನೆಯನ್ನು ಆಕ್ರಮಿಸಿವೆ ಅಂತ ವದಂತಿ ಇತ್ತು. ಕೋದಂಡ ಆ ಭೂತದ ಕಥೆಗಳನ್ನು ನಂಬದಿದ್ದರೂ, ಭೂತಗಳಿದ್ದಿದ್ದೇ ಆದರೆ ಅವುಗಳ ಶೋಧನೆಯನ್ನಾದರೂ ನಡೆಸಬಹುದೆಂಬ ಆಸೆ ಹೊಂದಿದ್ದ.

ಎರಡು ವಾರಗಳು ಕಳೆದಿರಬಹುದು. ಕೋದಂಡನಿಗೆ ತನ್ನ ಹೊಸ ಜಾಗದಲ್ಲಿ ಏನೊಂದೂ ತಾಪತ್ರಯವಾಗಲಿಲ್ಲ. ಆ ನಾಯಿ – ಶೂರ ಮಾತ್ರ ದಿನದಲ್ಲಿ ಎಣಿಸಿಟ್ಟ ಹಾಗೆ ಐದು ಬಾರಿ, ಅವನು ಬರೆಯುತ್ತ ಕುಳಿತಾಗಲೆಲ್ಲಾ, ಅವನ ಕಾಲಡಿಯಲ್ಲಿ ಮಲಗಿ ಎದ್ದು ಓಡಾಡುತ್ತಿತ್ತು. ಮೊದಲು ಮೊದಲು ಕೋದಂಡ, ಶೂರನ ಮೇಲೆ ಸಿಟ್ಟುಮಾಡಿದ. ಒಂದು ಬಾರಿ ಅದರ ದವಡೆಗೆ ಕೊಳೆತ ಮೂಸಂಬಿ ಹಣ್ಣನ್ನು ಕೂಡ ಬಾರಿಸಿದ್ದ. ಆದರೆ ಪ್ರಯೋಜನವಾಗಲಿಲ್ಲ. ಕೋದಂಡ ಅದರ ಸಹವಾಸವನ್ನು ಸುಮ್ಮನೆ ಅನುಭವಿಸಲು ಶುರುಮಾಡಿದ. ಎರಡು ವಾರಗಳು ಕಳೆದ ಮೇಲೆ ಒಂದು ದಿನ ಮಧ್ಯಾಹ್ನ ಕೋದಂಡ, ತನ್ನ ಹೊಸ ಪತ್ತೇದಾರಿ ಕಾದಂಬರಿ—"ಅರನೆಯ ಪ್ರೇತ"— ಬರೆಯುತ್ತ ಕುಳಿತಿದ್ದ ಒಂದು ಪುಟ ಬರೆದು ಬರೆದದ್ದನ್ನು ಓದಲಾರಂಭಿಸಿದ.

"ಈ ಹಾಳು ಗುಡಿಯಲ್ಲಿ ಒಬ್ಬ ನರಪ್ರಾಣಿ ಸಹ ಇರಲಿಲ್ಲ. ಸುತ್ತಲೂ ಕವಿದಿದ್ದ ಕಗ್ಗತ್ತಲೆಯ ರಾಜ್ಯಕ್ಕೆ ತಾನೇ ರಾಣಿ ಎನ್ನುವ ಹಾಗೆ ಆ ಸುಂದರ ಯುವತಿ ಕುಳಿತಿದ್ದಳು. ತನ್ನ ಬ್ಯಾಟರಿ ಬೆಳಕನ್ನು ಆಗಾಗ ತೋರಿಸುತ್ತಾ ದಾರಿ ಮಾಡಿಕೊಂಡು ಬಾಲಚಂದ್ರ ಅಲ್ಲಿಗೆ ಬಂದ. ಯುವತಿ ಎದ್ದು ನಿಂತಳು. ಎಲ್ಲೋ ನಾಟ್ಯವಾಡುತ್ತಿದ್ದ ಎರಡು ನವಿಲುಗಳು ಅಲ್ಲಿಗೇ ಬಂದವು ..."

ಅಂತ ಬರೆದಿದ್ದ.

ಛಿ! ಇದೇನು ಅನಿಷ್ಟ! ಕೋದಂಡನು ತನ್ನ ಕಣ್ಣುಗಳನ್ನು ತಾನೇ ನಂಬಲಿಲ್ಲ. ನಿಜವಾಗಿ "ಅರನೆಯ ಪ್ರೇತದ" ಕಥೆ ಹೀಗಲ್ಲ. ಅವನು ಕಲ್ಪಿಸಿದ್ದ ಕಥೆ ಹೀಗಿರಬೇಕಾಗಿತ್ತು—

"ಈ ಹಾಳು ಗುಡಿಯಲ್ಲಿ ಒಬ್ಬ ನರ ಪ್ರಾಣಿ ಸಹ ಇರಲಿಲ್ಲ. ಸುತ್ತಲೂ ಕವಿದಿದ್ದ ಕಗ್ಗತ್ತಲು ರಾಜ್ಯಕ್ಕೆ ತಾನೇ ಒಡೆಯನೋ ಅನ್ನುವ ರೀತಿಯಲ್ಲಿ, ಕಣ್ಣ

ದಾಸನ ಪ್ರೇತ ನೇತಾಡುತ್ತಿತ್ತು. ತನ್ನ ಬ್ಯಾಟರಿಯ ಬೆಳಕನ್ನು ಆಗಾಗ ತೋರಿಸುತ್ತಾ ದಾರಿ ಮಾಡಿಕೊಂಡು ಬಾಲಚಂದ್ರ ಆ ಪ್ರೇತದ ಸಮೀಪಕ್ಕೆ ಬಂದ. ಆಗಲೇ ಆ ಪ್ರೇತದ ಹಿಂಬದಿಯಲ್ಲಿ ಅಡಗಿದ್ದ ಎರಡು ಕೈಗಳು ಬಂದು ಬಾಲಚಂದ್ರನ ಕುತ್ತಿಗೆಯನ್ನು ಬಲವಾಗಿ ಅವುಕಿ ಹಿಡಿದವು.. ."

ಇದು ಕೋದಂಡನ "ಆರನೆಯ ಪ್ರೇತ"ದ ಭಾಗ. ಯಾವ ಯುವತಿಯೂ ಆ ದೃಶ್ಯದಲ್ಲಿ ಪ್ರವೇಶಿಸಲು ಕಾರಣವಿಲ್ಲ! ಆದರೆ ತನ್ನ ಮುಂದಿದ್ದ ಕೈ ಬರಹದ ಪ್ರತಿ ತಾನೇ ಬರೆದದ್ದು! ಅಕ್ಷರ ಅವನದ್ದೆ! ಮಸಿ ಇನ್ನೂ ಆರಿಸಿಲ್ಲ! ಇದಕ್ಕೆ ಕಾರಣ? ಕಾರಣ! ಕಾರಣ!!

ಅದೇ ಕ್ಷಣದಲ್ಲಿಯೇ ಮನೆಯಾಚೆ ಒಂದು ಕಾರು ಹಠಾತ್ತನೆ ಚೀತ್ಕಾರಮಾಡಿ ನಿಂತಂತೆ ಶಬ್ದವಾಯ್ತು. ಕೋದಂಡ ಏಕೋ ಬೆಚ್ಚಿದ. ಮರುಕ್ಷಣದಲ್ಲಿಯೇ ಕಾರಿನ ಬಾಗಿಲು ತೆರೆದ ಶಬ್ದ. ಯಾರೋ ಕಾರಿಂದಿಳಿದು ಮನೆಯ ಕಡೆ ಬರುತ್ತಿದ್ದ ಹಾಗೆ ಶಬ್ದ. ಎರಡು ಮೂರು ಧ್ವನಿಗಳು. ಇಬ್ಬರು ಪುರುಷರು, ಒಬ್ಬ ಮಹಿಳೆಯನ್ನು ಹೊತ್ತು ತಂದು, ದೊಡ್ಡ ಮನೆಯ ಹಾಲಿನಲ್ಲಿ ಒಂದು ಸೋಫಾ ಮೇಲೆ ಮಲಗಿಸಿದರು. ಮಹಿಳೆಯ ತಲೆಯ ಮೇಲೆ ಘಾಯ, ರಕ್ತಮಯವಾಗಿತ್ತು.

"ಕ್ಷಮಿಸಿ, ಈಕೆ ಈ ಮನೆಯವರು ಅಂತ ಕಾಣುತ್ತೆ. ಮನೆಯ ಗೇಟಿಂದಾಚೆ ನುಗ್ಗಿದಾಗ, ನಮ್ಮ ಕಾರಿನ ಮುಂದಿನ ಚಕ್ರದಡಿ ಹಠಾತ್ತನೆ ಬಿದ್ದರು. ಮೂರ್ಛೆ ಹೋಗಿದ್ದಾರೆ—ಕೂಡಲೇ ಡಾಕ್ಟರನ್ನ ಕರೆದುಕೊಂಡು ಬರುತ್ತೇನೆ. ನನ್ನ ಸ್ನೇಹಿತ ಇಲ್ಲೇ ಇರುತ್ತಾನೆ."

—ಅನ್ನುತ್ತಾ ಇಬ್ಬರಲ್ಲಿ ಒಬ್ಬಾತ ತನ್ನ ಕಾರಲ್ಲಿ ಹೋಗಿ ಒಬ್ಬ ಡಾಕ್ಟರನ್ನು ಕರೆದುಕೊಂಡು ಬಂದ.

"ಇನ್ನೂ ಹದಿನೈದು ದಿನಗಳು ಮಲಗಿದಲ್ಲೇ ಶೃಶೂಷೆ ನಡೆಯಬೇಕು." ಅಂದರು ಡಾಕ್ಟರು.

ಸರಿ, ದೊಡ್ಡ ಮನೆಯಲ್ಲಿ ಆ ಅಪರಿಚಿತ ಯುವತಿಯ ಶೃಶ್ರೂಷೆಗೆ ಶುರು ಮಾಡಿದ ಕೋದಂಡ ಬಲವಂತದಿಂದ. ಬರು ಬರುತ್ತ ತನ್ನ ಮನಸ್ಸಿಗೆ ಹಿಡಿಸದಿದ್ದರೂ ಕೋದಂಡನ ಹೃದಯ ಆ ಹುಡುಗಿಯನ್ನು ವರಿಸುತ್ತ ಬಂತು. ವಿಚಿತ್ರ ಸಂಗತಿ ಎಂದರೆ ಕೋದಂಡನಿಗೆ ಮೊದಲಿನಿಂದಲೂ ಆ ಯುವತಿಯನ್ನು ಎಲ್ಲೋ ನೋಡಿದ ಹಾಗೆ ಜ್ಞಾಪಕ ಬರುತ್ತಿತ್ತಂತೆ. ಪ್ರಾಯಶಃ ತನ್ನ ಕಾದಂಬರಿ "ಆರನೇ ಪ್ರೇತ"ದಲ್ಲಿ ಹಠಾತ್ತಾನೆ ಪ್ರವೇಶಿಸಿದ ಯುವತಿ ಇವಳೇ ಇರಬಹುದೇ? ಅಥವಾ ತನ್ನ ದೊಡ್ಡಮ್ಮ ಶ್ರೀರಂಗಮ್ಮ ಬರೆದ ಕಾದಂಬರಿ " ಒಂಟಿ ಕನ್ಯೆ"ಯಲ್ಲಿ ಬರುವ ಮಾನಾ ಇವಳೇ ಇರಬಹುದೇ? ಹೀಗೆಲ್ಲಾ ಯೋಚಿಸಿದ.

" ನನಗೆ ಶ್ರೀರಂಗಮ್ಮನವರ ಕಾದಂಬರಿ ಅಂದರೆ ತುಂಬಾ ಪ್ರೀತಿ. ಅವರ ಎಲ್ಲಾ ಕಥೆಗಳನ್ನೂ ನಾನು ಓದಿದ್ದೇನೆ ಒಂದೊಂದು ಬಾರಿ ಅಲ್ಲ. ಅನೇಕ ಬಾರಿ. ಶ್ರೀರಂಗಮ್ಮನವರು ಜೀವಂತವಿದ್ದಾಗ ಈ ಅವರ ಮನೆ ನೋಡಬೇಕೆಂದು ಆಸೆ ಇತ್ತು. ಆದರೆ ಆಗಲಿಲ್ಲ. ಈಗ ಈ ರೀತಿ ಕಾರಿನಡಿ ಸಿಕ್ಕಿ ತಲೆ ಘಾಯ ಮಾಡಿ ಕೊಂಡು, ಈ ಮನೆಗೆ ಬಂದು, ನಿಮಗೆ ತಾಪತ್ರಯ ಕೊಡಬೇಕೆಂದು ನನ್ನ ಹಣೆ ಯಲ್ಲಿ ಬರೆದಿತ್ತು! ನಿಮಗೆ ನನ್ನಿಂದ ತುಂಬಾ ತೊಂದರೆ ಅಲ್ಲವೆ ?"

—ಆ ಹುಡುಗಿಯ ಈ ಮಾತು ಕೇಳಿ ಕೋದಂಡನಿಗೆ ತುಂಬಾ ವ್ಯಸನ ವಾಯ್ತು. ಮನಸ್ಸಿಗೂ ಹೃದಯಕ್ಕೂ ಹೊಡೆದಾಟ ಬಲವಾಯ್ತು.

" ತೊಂದರೆ ಏನಿಲ್ಲ ಏನೇನೂ ಇಲ್ಲ" ಅಂದ.

ಆದರೆ ಕೋದಂಡನ ಮನಸ್ಸು ಮಾತ್ರ ಕಾರಿನಡಿ ಬಿದ್ದಾಗ ಈ ಹುಡುಗಿಯ ಪ್ರಾಣವೇತಕ್ಕೆ ಹೋಗಲಿಲ್ಲ? ಅಂತ ಯೋಚಿಸುತ್ತಾ ಇತ್ತು.

" ಹಾಗೇ ನೋಡಿದರೆ ಕೋದಂಡರಾವ್ ನೀವು ಶ್ರೀರಂಗಮ್ಮನವರ "ಮಾಲತಿಯ" ಪ್ರೇಮ ಓದಿದ್ದೀರಾ ಆ ಕಾದಂಬರಿಯಲ್ಲಿ ಮಾಲತಿ ಇದೇ ರೀತಿ ನನ್ನ ರೀತಿಯಲ್ಲೇ ಕಾರಿನಡಿಯಾಗಿ ತಲೆ ಒಡೆದುಕೊಂಡು ಭಾಸ್ಕರನ ಮನೆಗೆ ಪ್ರವೇ ಶಿಸುತ್ತಾಳೆ ನಿಮಗೆ ಜ್ಞಾಪಕವಿದೆಯೇ? ಅಂತ ಕೇಳಿದಳು.

" ನಾನು ಓದಿಲ್ಲ. "ಮಾಲತಿಯ ಪ್ರೇಮ" ಹೇಗೆ ಕೊನೆಗಾಣುತ್ತೆ? ಕೋದಂಡ ಕೇಳಿದ.

" ಮಾಲತಿ ಭಾಸ್ಕರನ ವಿವಾಹದಲ್ಲಿ ಆ ಕಾದಂಬರಿ ಒಂದೇ ಶ್ರೀರಂಗಮ್ಮನ ವರ ಕಾದಂಬರಿಗಳಲ್ಲೆಲ್ಲಾ ಸುಖದಲ್ಲಿ ಸಮಾಪ್ತಿಗೊಳ್ಳುವುದು ಕೋದಂಡರಾವ್ ನಿಮಗ ಆಶ್ಚರ್ಯವಾಗಬಹು ನನ್ನ ಹೆಸರು ಕೂಡ ಮಾಲತಿ!"

ಕೋದಂಡ ಕುಳಿತಿದ್ದವನು ಎದ್ದ ಮಾಲತಿ–ಭಾಸ್ಕರ ಮಾಲತಿ-ಕೋದಂಡ ಏಕಾಗಬಾರದು?

ಒಂದು ವಾರ ಮುಗಿಯುವ ಹೊತ್ತಿಗೆ ಮಾಲತಿ ಎದ್ದು ಓಡಾಡುವಷ್ಟಾದಳು. ಅಂದು ಡಾಕ್ಟರು ಬಂದರು. ಬಹಳ ಸಂತೋಷಪಟ್ಟರು.

" ಇಂದು ನಿಮ್ಮ ಅಣ್ಣ ಬರ್ತಾನಮ್ಮ. ಕಾಗದ ಹಾಕಿದ್ದೆ." ಅಂದರು.

ಅಣ್ಣ ಬಂದ. ವಿಚಾರ ತಿಳಿದಮೇಲೆ ಡಾಕ್ಟರಿಗೆ, ಕೋದಂಡನಿಗೆ ತನ್ನ ಕೃತ ಜ್ಞತೆಯನ್ನು ಸೂಚಿಸಿದ ತನ್ನ ತಂಗಿ ಮಾಲತಿ ಕಾಲೇಜು ಓದುತ್ತಿದ್ದವಳು ವಾರಾಂತ್ಯದ ರಜದಲ್ಲಿ ಹೇಗೆ ಮೊಂಡುತನ ಮಾಡಿ ಶ್ರೀರಂಗಮ್ಮನವರ ಮನೆ ನೋಡಿಕೊಂಡು ಹೋಗಲು ಬಂದಳೆಂದೂ, ಈ ಹಾಳು ಆಕಸ್ಮಿಕ ಸಂಭವಿಸಿ ಇಷ್ಟೆಲ್ಲಾ ತೊಂದರೆಗೆ ಕಾರಣಳಾದಳೆಂದೂ ಮರುಕಪಟ್ಟ.

ಡಾಕ್ಟರು ಅಣ್ಣನ ಕಿವಿಯಲ್ಲಿ ಏನೋ ಹೇಳಿದರಂತೆ. ಅಣ್ಣ ತಲೆ ತೂಗಿದನಂತೆ. ಒಂದು ಬಾರಿ ಕೋದಂಡನನ್ನೂ, ಒಂದು ಬಾರಿ ಮಾಲತಿಯನ್ನೂ ನೋಡಿದನಂತೆ.

"ತಥಾಸ್ತು—ಡಾಕ್ಟ್ರೇ." ಅಂದನಂತೆ.

ಇನ್ನೆರಡು ದಿನ ಕಳೆದವು. ಮಧ್ಯಾಹ್ನ ಊಟಮಾಡಿ ಮಾಲತಿ ಸೋಫಾ ಮೇಲೆ ಕುಳಿತಿದ್ದಾಳೆ. ಉಲನ್ ದಾರದಿಂದ ಏನೋ ಹಾಕುತ್ತಿದ್ದಾಳೆ. ಕೋದಂಡ ಉಲನ್ ದಾರದ ಚೆಂಡನ್ನು ಕೈಲಿ ಹಿಡಿದು ಎದುರು ಸೋಫಾದಲ್ಲಿ ಕುಳಿತಿದ್ದಾನೆ. ಶೂರ—ಕೆಳಗೆ ಗುಟುರು ಹಾಕುತ್ತಾ ಮಲಗಿದೆ ಇದ್ದಕ್ಕಿದ್ದ ಹಾಗೆ ಕೋದಂಡನ ಕೈಯಿಂದ ಉಲನ್ ಚೆಂಡು ಕೆಳಗೆ ಬಿತ್ತು. ಶೂರ—ಆ ಚೆಂಡನ್ನು ಬಾಯಲ್ಲಿ ಕಚ್ಚಿಕೊಂಡು ಓಡಿತು ಕೋದಂಡ ಶೂರನನ್ನು ಅಟ್ಟಿಸಿಕೊಂಡು ಹಿಂದೆಯೇ ಓಡಿದ. ಶೂರ—ರಸ್ತೆ ಹಿಡಿಯಿತು. ಕೋದಂಡನೂ ರಸ್ತೆ ಹಿಡಿದ ಶೂರ ಪಟ್ಟಣದ ಕಡೆ ಓಡಿತು. ಕೋದಂಡ ಹಿಂದೆಯೇ ಓಡಿದ. ಶೂರ ಮತ್ತೂ ಓಡಿತು. ಕೋದಂಡನೂ ಓಡಿದ. ಕೂಗಿದ, ಕಿರುಚಿದ, ಕಲ್ಲೆಸೆದ. ಏನೂ ಪ್ರಯೋಜನವಾಗಲಿಲ್ಲ. ಶೂರ – ಕೋದಂಡ ಮೆರವಣಿಗೆ ಸುಮಾರು ಮೂರು ಮೈಲಿಗಳಷ್ಟು ದೂರ ಸಾಗಿರಬಹುದು. ಒಂದು ಕೈಮರದ ಹತ್ತಿರ, ನಾಲ್ಕು ರಸ್ತೆ ಸೇರುವ ಕಡೆ ಶೂರ ಸುಸ್ತಾಗಿ ನಿಂತಿತು. ಕೋದಂಡನೂ ಮೇಲುಸಿರಾಡುತ್ತ ನಿಂತ. ಅವನಿಗೆ ನಾಯಿಯ ಮೇಲೆ ವಿಪರೀತ ಕೋಪ ಬೇರೆ—ಒಂದು ದೊಡ್ಡ ಕಲ್ಲನ್ನೆತ್ತಿ ಶೂರನ ತಲೆಯ ಮೇಲೆ ಹಾಕಲೇ ಅಂತ ಯೋಚಿಸಿದ. ಶೂರ ತನ್ನ ಬಾಯಲ್ಲಿದ್ದ ಉಲನ್ ದಾರದ ಚೆಂಡನ್ನು ಕೋದಂಡನ ಕಾಲಡಿ ಹಾಕಿತು.

ಕೋದಂಡ ಯೋಚಿಸತೊಡಗಿದ ಹೇಗೂ ಶೀರೂರು ಬಿಟ್ಟು ಬಂದಿದಾಯ್ತು ಹಾಗೇ ಪಟ್ಟಣ ಸೇರಿ ಏಕೆ ಪುನಃ ನಾಗರೀಕ ಪ್ರಜೆಯಂತೆ ಬಾಳಬಾರದು? ನಿಜವಾಗಿ ಶೂರ ತನಗೆ ಸ್ವಾತಂತ್ರ್ಯದ ಮಾರ್ಗ ತೋರಿಸಿತ್ತು. ಆದರೆ ತನ್ನ ಕಾದಂಬರಿಯ ಹಸ್ತಪ್ರತಿಗಳು? ತನ್ನ ಬಟ್ಟೆ ಬರೆ ಇತರೇ ಸಾಮಾನುಗಳು? ಹೇಗಾದರೂ ಮಾಡಿ ಆ ಹಸ್ತಪ್ರತಿಗಳನ್ನಾದರೂ ಹಾರಿಸಿಕೊಂಡು ಬಂದುಬಿಡಬೇಕೆಂದು ನಿರ್ಧರಿಸಿ ಆ ಉಲ್ಲನ್ ದ್ಾರದ ಚೆಂಡನ್ನು ಪುನಃ ಶೂರನ ಬಾಯಲ್ಲಿಟ್ಟು, ದೊಡ್ಡ ಮನೆ ಕಡೆ ಕಾಲು ಹಾಕಿದ. ಶೂರ ಹಿಂಬಾಲಿಸಿತು ಮೂರು ಮೈಲಿ ನಡೆದು ದೊಡ್ಡ ಮನೆಯ ಗೇಟಿನ ಬಳಿ ಸೇರುವ ಹೊತ್ತಿಗೆ, ಸಂಜೆಯಾಗಿತ್ತು. ಕೋದಂಡ ಗೇಟಿನೊಳಗೆ ಎಚ್ಚರಿಕೆಯಿಂದ ಪ್ರವೇಶಿಸಿದ.

"ಲಕ್ಕಾ!" ಅಂತ ಕೂಗು ಹಾಕಿದ.

ಲಕ್ಕ. ಲಕ್ಕಿ ಇಬ್ಬರೂ ಓಡಿ ಬಂದರು.

"ಲಕ್ಕಾ ಆ ಹುಡುಗಿ ಮಾಲತಮ್ಮ ಹೇಗಿದ್ದಾರೆ?" ಅಂತ ವಿಚಾರಿಸಿದ ಕೋದಂಡ.

"ಯಾವ ಹುಡುಗಿ ಸ್ವಾಮಿ? ಯಾವ ಮಾಲತಮ್ಮ?"

"ಅದೇ ಹುಡುಗಿ ಕಾರಿಗೆ ಸಿಕ್ಕಿ ಪೆಟ್ಟು ಮಾಡಿಕೊಂಡು ಒಳಗಿದ್ದಾಳಲ್ಲಾ "

"ರಾಯರೇ ಸ್ವಾಮಿ ನಿಮಗೆ ಉಸಾರಿಲ್ವಾ ಒಡೆಯ? ಇಲ್ಲಿ ಯಾವ ಕಾರೂ ಬರ್ಲಿಲ್ಲ, ಯಾವ ಮಾಲತಮ್ಮನೂ ಪೆಟ್ಟಾಗಿ ಮಲಗ್ನಿಲ್ಲ ಯಾಕ ಹಿಂಗ್ಹೇಳ್ತೀರಾ?"

ಕೋದಂಡ ದಿಗ್ಭ್ರಮಿಯಿಂದ ಮನೆಯೊಳಗೆ ಪ್ರವೇಶ ಮಾಡಿದ. ಯಾವ ನರಪಿಳ್ಳೆಯೂ ಇರಲಿಲ್ಲ ಮಾಲತಿಯ ಗುರುತು ಸಹ ಇರಲಿಲ್ಲ. ಮಾಲತಿಯ ಅಣ್ಣನ ಸುಳಿವೂ ಇರಲಿಲ್ಲ ಶೂರ ಅಲ್ಲೇ ಗುಟುರು ಹಾಕುತ್ತಾ ನಿಂತಿತ್ತು. ಅದರ ಬಾಯಿ ನೋಡಿದ ಉಲ್ಲನ್ ದಾರದ ಅವಶೇಷ ಕೂಡ ಇರಲಿಲ್ಲ.

ತಾನು ಬರೆದಿದ್ದ 'ಆರನೆ ಪ್ರೇತ'ದ ಭಾಗ ಅಲ್ಲೇ ಮೇಜಿನ ಮೇಲೆ ಮೊದಲಿದ್ದ ಹಾಗೇ ಇತ್ತು. ಓದಿದ

"ಈ ಹಾಳುಗುಡಿಯಲ್ಲಿ ಒಬ್ಬ ನರಪ್ರಾಣಿ ಸಹ ಇರಲಿಲ್ಲ. ಸುತ್ತಲೂ ಕವಿದಿದ್ದ ಕಗ್ಗತ್ತಲು ರಾಜ್ಯಕ್ಕೆ ತಾನೇ ಒಡೆಯನೋ ಅನ್ನುವ ರೀತಿಯಲ್ಲಿ, ಕಣ್ಣದಾಸನ ಪ್ರೇತ ನೇತಾಡುತ್ತಿತ್ತು. ತನ್ನ ಬ್ಯಾಟರಿಯ ಬೆಳಕನ್ನು ಆಗಾಗ ತೋರಿಸುತ್ತಾ ದಾರಿ ಮಾಡಿಕೊಂಡು ಬಾಲಚಂದ್ರ ಆ ಪ್ರೇತದ ಸಮೀಪಕ್ಕೆ ಬಂದ ಆಗಲೇ ಆ ಪ್ರೇತದ ಹಿಂಬದಿಯಲ್ಲಿ ಅಡಗಿದ್ದ ಎರಡು ಕೈಗಳು ಬಂದು. ಬಾಲಚಂದ್ರನ ಕುತ್ತಿಗೆಯನ್ನು ಒಲವಾಗಿ ಅವುಕಿ ಹಿಡಿದವು...." ಅಂತ ಸ್ಪಷ್ಟವಾಗಿ ಕೋದಂಡನ ಕೈ ಬರಹದಲ್ಲಿಯೇ ಬರೆದಿತ್ತು

ಕೋದಂಡ ತಡಮಾಡಲಿಲ್ಲ ತನ್ನ ಸಾಮಾನುಗಳನ್ನೆಲ್ಲಾ ಕಟ್ಟಿಕೊಂಡು ದೊಡ್ಡ ಮನೆ ಬಿಟ್ಟು ಹೊರಟು ಬಂದ. ಹೊರಡುವಾಗ ಶೂರನನ್ನೂ ಕರೆದ. ಅವನ ಹಿಂದೆಯೇ ಅದೂ ಹೊರಟಿತು ಪುನಃ ಕೋದಂಡನಾಗಲೀ, ಶೂರನಾಗಲೀ ಶೀರೂರು ದೊಡ್ಡ ಮನೆಯೊಳಗೆ ಪ್ರವೇಶಿಸಲಿಲ್ಲ.

ಒಂದು ವಿಚಿತ್ರ ವಿಷಯವೆಂದರೆ, ಕೊನೆಯವರಿವಿಗೂ ಕೋದಂಡ ಆ ನಾಯಿ ಶೂರನ ಸಹವಾಸ ಬಿಡಲಿಲ್ಲ. ಸತ್ಯವಾಗಿ ಹೇಳೋದಾದರೆ, ಯಾವ ಗೌರವಸ್ಥ ಮನುಷ್ಯನೂ ಬಲವಾದ ಕಾರಣವಿಲ್ಲದೆ, ಆ ಶೂರನಂತಹ ನಾಯಿಯೊಂದಿಗೆ ಸ್ನೇಹ ಬೆಳೆಸಲಾರ! ಇದು ಬಹಳ ಗಮನಾರ್ಹವಾದ ವಿಷಯ!

ಮಲ್ಹಾರಿ ರಾಯರು ತಮ್ಮ ಕಥೆ ಮುಗಿಸಿ, ಪುನಃ ನನ್ನನ್ನು ಕೇಳಿದರು.

—"ಈಗ ಹೇಳಿ ನಿಮಗೆ ಭೂತಗಳಲ್ಲಿ ನಂಬಿಕೆ ಉಂಟೋ ಇಲ್ಲವೋ?"

"ಉಂಟು ಮತ್ತು ಇಲ್ಲ." ಅಂದೆ.

— ಶೇಷ.

ಗರಿ ಕೆದರಿ

ಸರ ಪರ ಶಬ್ದವಾಯಿತು. ಹಿಂತಿರುಗಿ ನೋಡಿದೆ, ಪಕ್ಷಿಗಳ ಆವರಣದಲ್ಲಿ ನವಿಲೊಂದು ಗರಿ ಕೆದರಿ ಕೇಕೆ ಹಾಕಿ ನಲಿದಾಡುತ್ತಿತ್ತು. ಎಷ್ಟು ಚೆಂದ ಕಾಣಿಸಿತು ಅಂತ! ಸುಮಾರು ಎರಡು ಮಾರು ಉದ್ದವಿರಬೇಕು ನವಿಲುಗರಿಗಳು!! ಕ್ಯಾಮರಾವನ್ನು ಹಿಡಿದುಕೊಂಡು ಅತ್ತಕಡೆಗೆ ಓಡಿದೆ. ಸುಮಾರು ಒಂದು ಫರ್ಲಾಂಗ್ ದೂರವಿತ್ತು. ಧಡಿಯನಾದರೂ ಒಂದು ನಿಮಿಷದಲ್ಲಿ ಅಷ್ಟು ದೂರ ಓಡಿದ್ದೆ. ಏದುಬ್ಬಸ ಪಡುತ್ತಾ ತಂತಿಬೇಲಿಯ ಹತ್ತಿರ ನಿಂತೆ. ಕ್ಯಾಮರಾ ಸಿದ್ಧಮಾಡಿಕೊಂಡೆ. ಆ ಹೊತ್ತಿಗೆ ಸರಿಯಾಗಿ, ಆ ಹಾಳು ನವಿಲು ಗರಿಗಳನ್ನು ಮುದುರಿಕೊಂಡುಬಿಡ್ತು.

ಯಾರೋ ಹೇಳಿದ್ದರು ಕಡಲೆಕಾಯಿ ಬೀಜಗಳನ್ನು ಎಸೆದರೆ, ನವಿಲು ಗರಿ ಕೆದರಿಕೊಂಡು ನಿಲ್ಲುತ್ತೆ ಅಂತ. ಗುರಿ ಇಟ್ಟು ಕಡಲೆಕಾಯಿ ಬೀಜಗಳನ್ನು ಎಸೆದೆ. ಬಿಡಿಸಿಕೊಂಡು ತಿಂತೇ ವಿನಹಾ, ಗರಿ ಕೆದರಲೇ ಇಲ್ಲ. ಎಳೆ ಮಕ್ಕಳನ್ನು ಆಡಿಸುವ ಹಾಗೆ ಬೂಚಿ ಬೂಚಿ ಮಾತನಾಡಿದೆ. ಅದರ ಕಿವಿಗೆ ಕೇಳಿಸಲೇ ಇಲ್ಲ. ಹಳಂಳುಳಾಯಿ ಹಾಡಿದೆ. ಬಾಲಾನ ನನ್ನ ಕಡೆಗೆ ತಿರುಗಿಸಿ ಆ ಕಡೆಗೆ ನಡೆದುಹೋಯಿತು. ಆವರಣದಲ್ಲಿದ್ದ ಅದರ ಗೂಡಿನ ಒಳಕ್ಕೆ ಹೊರಟುಹೋಯಿತು.

ಚೆಂದದ ನವಿಲೇ. ಇಂದ್ರನ ಕಣ್ಣೇ

ಎಂದು ನನ್ನ ಕವಿತೆಯೊಂದನ್ನು ಆರಂಭಿಸಿದೆ.

ಗೂಡಿನೊಳಗಿಂದ ಆವರಣಕ್ಕೆ ಒಂದು ನವಿಲು ಹೊರಬಂದಿತು. ಹೆಣ್ಣು ನವಿಲು. ನೋಡುಕ್ಕೆ ಅವಲಕ್ಷಣ. ಸಕೇಶಿ ಕಳೆ ಅದಕ್ಕೆ. ಅದು ಬಂದು ನನ್ನೆದುರಿನಲ್ಲೇ ವಾಲಾಡುಕ್ಕೆ ಶುರುಮಾಡಿತು. ಅದರ ಫೋಟೋ ಹಿಡಿಯಲಿ ಎಂದು ಆಸೆಯೇನೋ ಪಾಪ, ಅದಕ್ಕೆ. ಅಷ್ಟರಲ್ಲೇ ಸರ್ರಂತ ಗೂಡಿನಿಂದ ಗಂಡು ನವಿಲು ಓಡಿಬಂತು. ಹೆಣ್ಣಿನ ಮುಂದೆ ನಿಂತುಕೊಂಡಿತು. ತನ್ನ ಹೆಣ್ಣನ್ನು ಯಾರೋ ಪರಪುರುಷ ನೋಡುತ್ತಾನಲ್ಲ ಅಂತ ಅದಕ್ಕೆ ಕೋಪ ಬಂದಿರಬೇಕು. ತನ್ನ ಹೆಣ್ಣಿನ ನಗ್ನ ಫೋಟೋ ತೆಗೆಯುತ್ತಾನಲ್ಲ, ಯಾರೋ ಕುಲಗೇಡಿ ಅಂತ ರೇಗಿರಬೇಕು ಅದಕ್ಕೆ. ನನ್ನನ್ನೇ ದುರು ದುರುಗುಟ್ಟಿಕೊಂಡು ನೋಡುತ್ತ ನಿಂತಿತು. ಹೇಗೂ ಇರಲಿ ಅಂತ ಕ್ಯಾಮರಾವನ್ನು ಸಿದ್ಧಮಾಡಿಕೊಂಡೆ. ಗಂಡಿನ ಹಿಂದೆ ಇದ್ದ ಹೆಣ್ಣು

ನವಿಲು, ಸ್ವಲ್ಪ ಥರಪರಗುಟ್ಟಿತು. ಗಂಡಿಗೆ ಅನುಮಾನ ಬಂದಿರಬೇಕು. ಹೆಣ್ಣು ತನ್ನ ಹಿಂದೆ ನಿಂತು, ತನಗೆ ಕಾಣಿಸದೆ ಇರುವಾಗ, ಏನಾದರೂ ಬಿನ್ನಾಣದ ಆಟವನ್ನು ಶುರುಮಾಡಿದೆಯೇನೋ ಎಂದು ಗಂಡಿಗೆ ಅನುಮಾನ ಬಂದೀತೇನೋ? ಅಥವಾ ಹೆಣ್ಣು ಸ್ವಲ್ಪ ಹಿಂದಕ್ಕೆ ಹೋಗಿ, ಕ್ಯಾಮರಾ ದೃಷ್ಟಿಗೆ ಬೀಳುವಂತೆ ನಿಂತಿದೆಯೇನೋ ಎಂದು ಅನುಮಾನ ಬಂದಿರಬಹುದು.

ರೇಗಿ ಸರ್ರಂತ ಗರಿ ಕೆದರಿ, ಕಾಲಿನ ಉಂಗುಷ್ಟವನ್ನು ನೆಲಕ್ಕೆ ಝಾಡಿಸುತ್ತಾ ಕೋಪದಿಂದ ಕಣ್ಣುಗಳಲ್ಲಿ ಕಿಡಿ ಕಾರಿಸುತ್ತಾ ಗಂಡು ನವಿಲು ನಿಂತಿತು. ಎರಡೂ ಮಾರಿನ ಆ ನವಿಲು ಗರಿಗಳು ಕೆದರಿ ನಿಂತಾಗ, ಗಂಡು ನವಿಲು ಎಷ್ಟು ಚೆಂದ ಕಾಣಿಸಿತು! ಬೇಗ ಬೇಗ ಎರಡು ಫೋಟೋ ಹಿಡಿದುಕೊಂಡೆ. ಮನೆಗೆ ಹೋಗಿ ಕೇಳಿದಾಗ ಮಜ್ಜಿಗೆ ಕೊಡದೆ ಇದ್ದವಳು, ಹೇಳಿಕಳಿಸಿದರೆ ಹಾಲು ಕಳಿಸಿದಂತಾಯ್ತು!

ತಲೆ ವಾಲಿಸಿ ಹಿಂತಿರುಗಿ ಗಂಡು ನವಿಲು ನೋಡಿತು. ಆ ಹೊತ್ತಿಗೆ ಹೆಣ್ಣು ಗೂಡನ್ನು ಸೇರುತ್ತಿತ್ತು.

ಜಟ್ಟಂತ ಗರಿಗಳನ್ನು ಮುದುರಿಕೊಂಡು "ತಡೆಯೇ, ಬಂದೆ! ನಿನ್ನ ಮೇಲೆ ಕೋಪ ಇಲ್ಲ ಕಣೆ! ಆದರೆ ಪರಪುರುಷರು ನಿನ್ನನ್ನು ನೋಡಬಾರದು ಅಂತ ರಕ್ಷಣೆಗೆ ಬಂದಿದ್ದೆ ಕಣೆ! ಅಷ್ಟೇ!! ಇಷ್ಟಕ್ಕೇ ಮುನಿಸಿಕೊಳ್ಳುತ್ತಾರೆಯೇನೇ ಮಹಾರಾಯ್ತಿ" ಎಂದು ಕೇಕೇ ಹಾಕುತ್ತಾ ಗಂಡು ನವಿಲು ಗೂಡಿನತ್ತ ಗಡಬಡ ಓಡಿತು.

ಸೊಗಸಾದ ಫೋಟೋಗಳು ದೊರಕಿದುವು ನನಗೆ. ಹೆಣ್ಣಿಗೆ ಎಷ್ಟು ದ್ರಾಕ್ಷೆ ಕಳೆ ಅಂತ ನಮಗನ್ನಿಸಿದರೂ, ಅದರ ಹಿಂದೆಯೇ ಓಡುವ ಸ್ವರದ್ರೂಪಿ ಗಂಡುಗಳ ಮನಸ್ಸಿನ ಗತಿ ಸ್ವಲ್ಪ ಅರ್ಥವಾಯಿತು.

ನಿಮ್ಮ ಗೋತ್ರ ಯಾವುದು?

ವಿದ್ಯಾರ್ಥಿಗಳ ಮುಷ್ಕರದಲ್ಲಿ ಮುಖಂಡರಾಗಿದ್ದ ಒಬ್ಬ ತರುಣನನ್ನು ನೋಡಿದ ಕನ್ಯಾಪಿತೃಗಳೊಬ್ಬರಿಗೆ, ಪರವಾಗಿಲ್ಲ ಮುಂದೆ ಮಂತ್ರಿಯಾಗುವ ಕಳೆ ಇದೆ ಮುಖದಲ್ಲಿ, ಮಗಳನ್ನು ಕೊಡಬಹುದು" ಎಂದೆನಿಸಿ, ಕಾಲೇಜ್ ಗೇಟಿನ ಬಳಿ ಅವನನ್ನು ತಡೆದು ನಿಲ್ಲಿಸಿ, ಏನಪ್ಪಾ! ನಿನ್ನ ಗೋತ್ರ ಯಾವುದು?" ಎಂದು ಕೇಳಿದರು.

"ಸ್ವಾಮಿ, ನನಗೆ ಗೊತ್ತಿಲ್ಲ. ದಯವಿಟ್ಟು ನಮ್ಮ ತಂದೆಯವರನ್ನು ವಿಚಾರಿಸಿ" ಎಂದು ಅಡ್ರೆಸ್ ಕೊಟ್ಟ ಹುಡುಗ.

ಕನ್ಯಾ ಪಿತೃಗಳು ಅವರನ್ನು ಕಂಡು ಉಭಯ ಕುಶಲೋಪರಿ ಸಾಂಪ್ರತವಾದ ಮೇಲೆ, ಅವರ ಮಗನನ್ನು ಕಂಡಿದ್ದನ್ನು ತಿಳಿಸಿ, ಅವರ ಗೋತ್ರ ವಿಚಾರಿಸಿದರು.

ಅವರು—ಸ್ವಾಮಿ,....ಈ ಮಗನಿಗೆ ಮೊನ್ನೆತಾನೇ ಮುಂಜೀ ಮಾಡಿದೆ. ಆಗಲೇ ಗೋತ್ರ ಮರೆತುಬಿಟ್ಟಿದ್ದಾನೆ ನನಗೆ ನಮ್ಮಪ್ಪ ಮುಂಜೀ ಮಾಡಿ ನಲವತ್ತು ವರ್ಷ ಆಯಿತು. ಇನ್ನು ನನಗೆ ಹೇಗೆ ನೆನಪಿರಬೇಕು, ಸ್ವಾಮಿ" ಎಂದು ಪೇಚಾಡಿದರು.

—ಜವರ

ಇಂಟರ್‌ವ್ಯೂ

ಒಂದಾನೊಂದು ಊರು. ಕುಂಟೇಮಾರ್ನ ಹಳ್ಳಿ. ಅಲ್ಲಿ ಒಂದಾನೊಂದು ಇಸ್ಕೂಲು ಪ್ರೈಮರಿ ಇಸ್ಕೂಲು. ಆ ಇಸ್ಕೂಲಿನಲ್ಲಿ ಒಬ್ಬ ಜವಾನ. ಒಂದು ದಿನ ಗಬಾರಂತ ಮಾಯವಾದ. ಒಂದು ವಾರವಾಯಿತು, ತಿಂಗಳಾಯಿತು. ಆದರೂ ಅವನ ಉರುವೇ ಇಲ್ಲ. ವಿಧಾನಸೌಧದ ಫೈಲಿನಂತೆ ಎಲ್ಲಿಯೋ ಪರಾರಿಯಾದ. ಅವನನ್ನು "ಹಲ್ಕ" ಎಂದು ಕನ್ನಡದಲ್ಲೇ ಬೈಯುತ್ತಾ ಸ್ಕೂಲು ಮಾಸ್ತರು ಸಮಾಚಾರವನ್ನು ಊರಿನ ಪಂಚಾಯಿತಿಗೆ ಮುಟ್ಟಿಸಿದರು.

ಪಂಚಾಯಿತಿಯ ನಂಬ್ರುಗಳು ಅವನ ಜಾಗಕ್ಕೆ ಬೇರೆಯವರನ್ನು ನೇಮಿಸಿಕೊಳ್ಳಲು ತೀರ್ಮಾನಿಸಿದರು. ಕೆಲಸಕ್ಕೆ ನಾಮುಂದು ತಾಮುಂದು ಎಂದು ಮುಂದೆ ಮುಂದೆ ಮೇಲೆ ಮೇಲೆ ನುಗ್ಗಿ ನುಗ್ಗಿ ಬರುವ ಮಂದಿಗೇನು ಕೊರತೆಯೇ?

"ನಮ್ಮ ಸಿದ್ದನ್ನ ಸೇರಿಸಿಕೊಳ್ಳಿ"

'ನಮ್ಮ ಮುದ್ದನ್ನ ಸೇರಿಸಿಕೊಳ್ಳಿ"

"ನಮ್ಮ ಇವನನ್ನ ಸೇರಿಸಿಕೊಳ್ಳಿ ಅವನನ್ನು ಸೇರಿಸಿಕೊಳ್ಳಿ...." ಮುಂತಾಗಿ ಹಲವಾರು ವಲಯುಗಳಿಂದ ಒತ್ತಡ ಜಡಿಯತೊಡಗಿತು ಆದರೆ ಇಂಥವಕ್ಕೆಲ್ಲಾ ಬಗ್ಗುವ ಕುಳವೇ ಪಂಚಾಯ್ತಿ ಚೇರ್‌ಮ್ಯಾನ್ ಶ್ರೀ|| ಉಳ್ಳಾಕಡ್ಡಿಯವರು? ಇಲ್ಲ, ಎಂದಿಗೂ ಇಲ್ಲ, ಎಂದೆಂದಿಗೂ ಇಲ್ಲ.

"ನಾನು ಗಾಂಧಿ ಸಿಸ್ಯ. ಕನ್ನಡಿ ತಲೇಗೆ ಗುಂಡು ಬಡಿದಂಗೆ ನನ್ನ ಹೊಟ್ಟೇಗೆ ಗುಂಡು ಆಕಿದ್ರೂ ನಾನು ರೈಟ್ ದಾರೀಲೇ ನಡಿಯೋ ಮಗ. ಇಂಗೆಲ್ಲಾ ಅನ್ಯಾಯ ಮಾಡಿದ್ರೆ ನಮ್ಮ ಇಂಡಿಯ ಎಂಗೆ ಉಳೀತೈತೆ. ಮೊದಲು ಎಲ್ಲಾ ಅಪ್ಲಿಕೇಸನ್ನು ಗೋಳೂ ಬರಲಿ ಆಮೇಲೆ ಇಂಟರ್‌ವ್ಯೂ ಮಾಡೋವಾ. ಆಮೇಲೆ ಯಾವ ಬೇಕೂಪನನ್ನಾದರೂ ತೆಗೊಳ್ಳುವಾ" ಎಂದು ಏಕ್‌ದಂ ತಮ್ಮ ಪಂಚಶೀಲವನ್ನು ಒದರಿ ಹಾಕಿದರು.

ಅವರ ಬೆನ್ನು ಚಪ್ಪರಿಸಿದವರೆಂದರೆ ಸ್ಕೂಲು ಮಾಸ್ತರರು!

"ನೀವು ಸರಿಯಾದ ಮಾತು ಹೇಳಿದಿರಿ ಗೌಡರೆ. ಅರ್ಜಿಗಳು ಬರಲಿ ಮೊದಲು. ಈಗೇನು ಕಲಿತ ಮುಂಡೇಗಂಡರು ಕಂಡಾಪಟ್ಟೆ ಬರ್ತಾರೆ. ಯಾವನಾ

ದರೂ ಒಬ್ಬ ಗ್ರಾಜುಯೇಟ್‌ನನ್ನು ಸೇರಿಸಿಕೊಂಡರೆ ನನಗೂ ಉಪಕಾರವಾಗುತ್ತೆ.... ಹಿಂದೀ ಬಂದರೆ ಮತ್ತೂ ಒಳ್ಳೆಯದೆ...."

ಸರಿ. ಪೇಪರುಗಳಲ್ಲೆಲ್ಲಾ ಅಡ್ವರ್ಟೈಸ್ ಮಾಡಿ ಆಯಿತು. ದೇಶದ ನಾನಾ ಮೂಲೆಗಳಿಂದ ಅರ್ಜಿಗಳು ಬಂದು ಸುರಿಯತೊಡಗಿದವು. ಪದವೀಧರರು, ದ್ವಿಪದ ವೀಧರರು, ಅಪದವೀಧರರು, ರಿಟೈರ್ಡ್ ಸ್ಕೂಲು ಮಾಸ್ತರುಗಳು, ಪೋಸ್ಟ್ ಮಾಸ್ಟರುಗಳು ಅವರು ಇವರು ಎಲ್ಲಾ ಅರ್ಜಿಗಳನ್ನೂ ಗುಜರಾಯಿಸಿದರು.

ಕುಂಟೀಮಾರನ ಹಳ್ಳಿ ಏಕ್‌ದಂ ಬಹಳ ಪ್ರಾಮುಖ್ಯ ಪಡೆಯಿತು. ಯಾರು ಯಾರೋ ಬರತೊಡಗಿದರು. ಪುಡಾರಿಗಳು ಸುತ್ತಾಡತೊಡಗಿದರು. ಅನೇಕರು ಅನೇಕ ಶಿಫಾರಸು ಪತ್ರಗಳನ್ನು ಹಿಡಿದುಕೊಂಡು ಬಂದಿಳಿಯತೊಡಗಿದರು ಶಿಫಾರಸು ಪತ್ರಗಳು ಮಂತ್ರಿಗಳಿಂದ, ಮಠಾಧಿಪತಿಗಳಿಂದ, ಮಂತ್ರಿಣಿಗಳಿಂದ, ಮಹಾನಾಯಕರುಗಳಿಂದ ಬರತೊಡಗಿದವು, ಪಂಚಾಯಿತಿಯ ನಂಬ್ರುಗಳನ್ನು ಅನೇಕರು ಅಫೀಸಿನಲ್ಲಿ, ಮನೆಯಲ್ಲಿ, ಅಲ್ಲಿ ಇಲ್ಲಿ, ಒಂಟಿಯಾಗಿ ಒಟ್ಟಾಗಿ ಕಾಣತೊಡಗಿದರು.

ಕುಂಟೀಮಾರನ ಹಳ್ಳಿಯ ಮುಖವೇ ಬದಲಾಯಿಸತೊಡಗಿತು. ಅಲ್ಲಲ್ಲಿ ಹೋಟಲುಗಳು ತೆರೆಯಲ್ಪಟ್ಟವು. ಹೋಟಲುಗಳಲ್ಲಿ ಮಸಾಲೆ ದೋಸೆಗಳು ಚುಂಯ್ ಗುಡತೊಡಗಿದವು. ಹೊಸ ಹೊಸ ಅಂಗಡಿಗಳು ತಲೆಯೆತ್ತತೊಡಗಿದವು ಅಂಗಡಿಗಳಲ್ಲಿ ಬೆಣ್ಣೆ ಬಹಳ ಖರ್ಚಾಗತೊಡಗಿ, ಬೆಲೆ ತೆಂಗಿನೆಗಳಂತೆ ಏರಿತು.

ಅನೇಕರಿಗೆ ಇಂಟರ್‌ವ್ಯೂ ಕರೆ ತಲುಪಿ ಅವರು ಹಾರುತ್ತಲೇ ಬಂದರು. ಇಂಟರ್‌ವ್ಯೂ ದಿನವಂತೂ ಪಂಚಾಯಿತಿ ಆಫೀಸಿನ ಮುಂದೆ ಪಂಚಾಯಿತಿಯೋ ಪಂಚಾಯಿತಿ; ಗಲಾಟೆಯೋ ಗಲಾಟೆ; ಗುಂಪೋ ಗುಂಪು; ಕ್ಯೂ ವೊ ಕ್ಯೂ ಊರಿನಾಚೆಯ ಹಳ್ಳದವರೆಗೂ ಕ್ಯೂ ಹಬ್ಬಿತ್ತು. ಬಿಸಿಲು, ಮಳೆ, ಗಾಳಿಗಳ ಲೆಕ್ಕವಿಲ್ಲದೆಯೇ ಕ್ಯೂ ನಿಂತ ಅವರ ಅನುಭವ ಬೆಂಗಳೂರಿನಲ್ಲಿ ಬಿಟಿಯೆಸ್‌ಗಳಿಗಾಗಿ ಕಾದು ನಿಂತಿದ್ದಾಗಲೇ ಸಂಪಾದನೆಯಾದದ್ದೆಂದು ಬೇರೆ ಒತ್ತಿ ಹೇಳಬೇಕೇನು?

ಕೆಲವರು General-knowledge ಪುಸ್ತಕಗಳ ಹಾಳೆಗಳನ್ನು ತಿರುವುತ್ತಿದ್ದರು. ಕೆಲವರು ಕಡಲೆಕಾಯಿ ಮಾರುತ್ತಿದ್ದರು. ಕೆಲವರು ತಮ್ಮ ಹೆಣ್ಣು ಮಕ್ಕಳ ಮದುವೆಯ ಮಾತಾಡುತ್ತಿದ್ದರು. ಕೆಲವರು ನಿಂತಿದ್ದರು; ಕೆಲವರು ಕುಳಿತಿದ್ದರು; ಕೆಲವರು ಮಲಗಿದ್ದರು.

ಇಂಟರ್‌ವ್ಯೂ ಮೊದಲಾಯಿತು. ಆಫೀಸು ಕೋಣೆಯಲ್ಲಿ ಪಂಚಾಯಿತಿ ನಂಬ್ರುಗಳ ಮಧ್ಯೆ ಚೇರ್‌ಮ್ಯಾನ್ ಉಳ್ಳಾಕಡ್ಡಿಯವರು ಮೀಸೆ ತಿರುವುತ್ತಾ ಕುಳಿತಿದ್ದರು ಅವರ ಕಣ್ಣುಗಳು ಒಂದೊಂದೂ ಒಂದೊಂದು ದಿಕ್ಕಿನ ಕಡೆ ವಾಲಿದ್ದರೂ ಭಾವೈಕ ಸಾಧನೆಯ ಪ್ರತೀಕವಾಗಿದ್ದುವು. ಮೊದಲನೆಯ ಅಭ್ಯರ್ಥಿ ಒಳಕ್ಕೆ ಬಂದಾಗ ಗೌಡರು "ಕುಂತ್ಕೊಳ್ಳಿ" ಎಂದರು. ಅವನು "ಹಿಹ್ಹಿಹಿ" ಎಂದ ನಿಂತೆ!

ಕುರ್ಚಿಯಿದ್ದರೆ ತಾನೆ ಅವನು ಕುಳಿತುಕೊಳ್ಳುವುದು! ಆದರೂ ಗೌಡರು ಪ್ರಶ್ನೆಗಳನ್ನೆಸೆದರು ಅವನ ಮುಖಕ್ಕೆ.

"ಯಾವೂರು ?"

"ಧಾರವಾಡ"

"ಅಲ್ಲಿ ಏನೇನು ಸಿಗ್ತೈತೆ"

"ಏಲ್ಲಾ"

"ಏನು ತಂದಿದೀರಿ ?"

"ಜೋಳಿಗೆ; ಕಂಬಳಿ"

"ಜೋಳಿಗೆ ಯಾಕತಂದ್ರಿ"

"ಕೆಲಸ ಸಿಗೋತನಕ ಕೈನೆರವಾಗಿರಲಿ ಅಂತ"

"ಭಾಳ ಶಹಣೆ ಇದ್ದೀರ್ರೀ, ಅಲ್ವಾ"

ಅರ್ಜಿಯನ್ನು ಪಕ್ಕಕ್ಕೆ ಸರಿಸಿದರು ಗೌಡರು. ಎರಡನೆಯವನು ಒಳಬಂದ. ಅವನ ಸ್ಥಿತಿ ಮತಿಗಳನ್ನು ದೃಷ್ಟಿಯಿಂದಲೇ ತೂಕ ಮಾಡುತ್ತಾ ಗೌಡರು ಕೇಳಿದರು.

"ವಯಸ್ಸು ?"

"ಅರವತ್ತು"

"ಮಕ್ಕಳು ?"

"ಆರು"

"ಹೆಂಡತಿಗಳು ?"

"ಎರಡು ಸತ್ತು ಹೋಗಿದ್ದಾರೆ."

"ಒಳ್ಳೇದು. ಇದುವರಗ್ಗೂ ನೀವು ಏನ್ ಮಾಡ್ತಿದ್ರಿ?"

"ನಿಂತುಕೊಂಡಿದ್ದೆ"

"ಅದಲ್ರೀ ಕೆಲಸ ಏನ್ ಕೆಲಸ ಮಾಡ್ತಿದ್ರಿ ?"

"ಏನೂ ಯಿಲ್ಲ. ಕೆಲಸ ಹುಡುಕ್ತಾ ಹುಡುಕ್ತಾ ಮುದುಕನಾದೆ ಕೆಲಸ ಕೊಟ್ಟು ಪುಣ್ಯ ಕಟ್ಟಿಕೊಳ್ಳಿ ಎಂದು ಅವನು ಅಡ್ಡ ಬಿದ್ದೇ ಬಿಟ್ಟ.

ಗೌಡರು ಆಗಲಿಯೆಂದರು ಅವನು ಹೊರಟುಹೋದ. ಮೂರನೆಯವನು ಸೂಟುಧಾರಿ, ಪುಸ್ತಕಪಾಣಿ ಒಳಗೆ ಬಂದ.

"ಏನು ಓದಿದ್ರಿ"

"ಬಿ. ಎ ಪಾಸ್ ಮಾಡಿದೇನೆ ?"

" ಯಾಕೆ ಮಾಡಿದ್ರಿ ? "

" ಕೆಲಸ ಸಿಗಲಿಲ್ಲ. ಅದಕ್ಕೇ ಓದಿದೆ.

ಓದಿ ಉದ್ಧಾರ ಆಗೋದು ಅಷ್ಟರಲ್ಲೇ ಇದೆ ಅಲ್ಲವೇನ್ರಿ" ಎಂದರು ಉಳ್ಳಾಕಡ್ಡಿಯವರು

ಆಮೇಲೆ ಪ್ರಶ್ನೆ ಹಾಕಿದರು.

" ಒಂದು ಪರಕೇಲಿ ಎಷ್ಟು ಕಡ್ಡೀ ಇರ್ತವೆ ?"

'..... .. .."

ಅಭ್ಯರ್ಥಿಯು ಕೈಯಲ್ಲಿದ್ದ General–knowledge ಪುಸ್ತಕ ಅಳುತ್ತಿತ್ತು.

" ಓದ್‌ಬುಟ್ರೆ ಬಂತೇನ್ರೀ ಭಾಗ್ಯ ...ಗ್ಯಾನ ಸಂಪಾದಿಸಬೇಕು ...ಗ್ಯಾನ."

ಕಸಗುಡಿಸೋ ಜವಾನರಿಗೆ ಪರಕೇಲಿ ಎಷ್ಟು ಕಡ್ಡಿ ಐತೆ ಅಂತ ತಿಳೀಬ್ಯಾಡ್ವಾ!

ಗ್ರ್ಯಾಜುಯೇಟ್ ಸಿರ್ಗಮನ.

ಮೂರು ದಿನಗಳಾದ ಮೇಲೆ ಇಸ್ಕೂಲಿಗೆ ಹೊಸ ಜವಾನನ ನೇಮಕವಾಯ್ತು. ಅವನು ಬೇರೆ ಯಾರೂ ಅಲ್ಲ. ನಮ್ಮ ಗೌಡರ ಮನೆಯ ಆಳು ತಿಮ್ಮ!

ಹೊಸ ಜವಾನನ ಬಗ್ಗೆ ಕೆಲವು ಸೂಚನೆಗಳನ್ನು ಕೊಡುತ್ತಾ ಗೌಡರು ಸ್ಕೂಲ್ ಮಾಸ್ತರರಿಗೆ ಹೇಳಿದರು.

" ನಿಮಗೆ ಬೇಕಾದ್ರೆ ಹೇಳ್‌ಕಳ್ಸಿ. ತಿಮ್ಮ ನಮ್ಮ ಮನಿಯಾಗೇ ಇರ್ತಾನೆ ಕಳಿಸ್ತೀನಿ."

" ನಿಮ್ಮ ಮನೆಯಲ್ಲಿರ್ತಾನೆಯೇ ! ಏಕೆ ? "

" ಓ ಅದೇ ಹಿಂದೀ ಕಲಿಸ್ತಿದ್ದೀನಿ....ನೀವೇ ಏಳಿದ್ರಲ್ಲಾ....ಹಿಂದಿ ಬಂದಿದ್ರೆ ಉತ್ತಮ ಅಂತ."

ಮಾಸ್ತರು ಮುಚ್ಚಿಕೊಂಡರು—ನುಖಾನ.

ಎಲ್ಲಿನ್ಸ್—

ತೋಳ ಬಂತು, ತೋಳ

"ದೇವಸ್ಥಾನದಿಂದ ಕೈಂಕರ್ಯ ಮುಗಿಸಿಕೊಂಡು, ಆಗತಾನೆ ಮನೆಗೆ ಘನಪಾಟಿಗಳು ಹಿಂತಿರುಗಿದ್ದರು. ಕೈಕಾಲು ತೊಳೆದುಕೊಂಡು ಆಚಮನ ಮಾಡಿ ಮಣೇಲಿ ಕುಳಿತುಕೊಂಡು, ಸುಧಾರಿಸಿಕೊಳ್ಳಬೇಕು, ಅಷ್ಟರಲ್ಲೇ ಮನೆಯಾಕೆ ಶುರು ಮಾಡಿದಳು "ದೇವರು ದಿಂಡರು, ವೇದ ಉಪನಿಷತ್ತು ಅಂತ ನೀವು ಕೂತುಬಿಟ್ಟಿದ್ದೀರಿ. ಮಾವನವರ ಪುಣ್ಯದಿಂದ ಉಣ್ಣೋಕ್ಕೆ ಉಡುಕ್ಕೆ ಬೇಕಾದಷ್ಟಿದೆ. ದಿಟ. ಆದರೂ ಇರೋಳು ಒಬ್ಬಳೇ ಮಗಳು. ಹದಿನೆಂಟಾಯ್ತು ವಯಸ್ಸು. ಕಾಲೇಜಲ್ಲಿ ಓದುತ್ತಾ ಇದ್ದಾಳೆ. ಕಂಡ ಕಂಡ ಹುಡುಗರ ಜತೆಯಲ್ಲಿ ಓಡಾಡ್ತಾಳೆ. ಪರೀಕ್ಷೆ ಮಾಡಬಾರದು ಅಂದ್ರೆ. ಬೇಗ ಮದುವೆ ಮಾಡಬೇಕು." ಎಂದು. ಈ ಸರ್ತಿ ಪ್ಯಾಸಾಗಲಿ ಆಮೇಲೆ ರಜಾ ಬಂದಾಗ ನೋಡೋಣ. ನೋಡುಕ್ಕೆ ಲಕ್ಷಣವಾಗಿದ್ದಾಳೆ ಸಾಕಷ್ಟು ಆಸ್ತಿ ಇದೆ. ಅವಳಿಗೆ ಗಂಡು ಸಿಗೋದು ಏನು ಕಷ್ಟ?" ಎಂದು ಘನಪಾಟಿಗಳು ಉತ್ತರಿಸಿದರು.

* * * *

ಒಂದು ತಿಂಗಳಾಯಿತು.—"

ಯಾರೋ ರಾಮು ಅಂತ ಅಂದ್ರೆ ಅವನ ಜತೇಲಿ ಕುಸುಮಾ ತುಂಬಾ ಓಡಾಡ್ತಾಳೆ. ಯಾವ ಜಾತೀನೋ, ಯಾವ ಕುಲಾನೋ, ಸ್ವಲ್ಪ ವಿಚಾರಿಸಬಾರದೆ ಅಂದ್ರೆ ಅಂತ ಹೆಂಡತಿ ಕುಕ್ಕಿದಾಗ, ಘನಪಾಟಿಗಳು ಕಾಲೇಜಿಗೆ ಹೋಗಿ ತಮ್ಮ ಸ್ನೇಹಿತರಾದ ತೆಲುಗು ಪಂಡಿತರ ಮುಖೇನ ವಿಚಾರಿಸಿದರು ಕಾಲೇಜು ನಾಟಕದಲ್ಲಿ ರಾಮು ದುಷ್ಯಂತನ ಪಾತ್ರ ವಹಿಸಿದ್ದನೆಂದೂ ಕುಸುಮಾ ಶಕುಂತಲೆ ಪಾತ್ರ ವಹಿಸಿದ್ದಳೆಂದೂ, ಆ ಕಾರಣದಿಂದ ಅವರು ಜತೆ ಅಡ್ಡಾಡುತ್ತಿದ್ದರೆಂದೂ, ನೋಡುಕ್ಕೆ ಲಕ್ಷಣವಾಗಿದ್ದರೂ ರಾಮು, ನಿರ್ಗಂಧ ಕುಸುಮ. ಅವನನ್ನು ಕಂಡರೆ ಕುಸುಮ ಮೂದಲಿಸುತ್ತಾಳೆ ಎಂದು ತಿಳಿಯು ಬಂತು.

ನೋಡುಕ್ಕೇನೋ ತೋಳ ಇದ್ದ ಹಾಗಿದ್ದ ಎಲ್ಲಿ ನಮ್ಮ ಹುಡುಗೀನ ಹಾರಿಸಿಕೊಂಡು ಹೋಗಿ ಬಿಡ್ತಾನೋ ಅಂತ ಹೆದರಿದ್ದೆ ಅಂದ್ರೆ ಎಂದು ಹೆಂಡತಿ, ವಿಷಯವನ್ನೆಲ್ಲಾ ವಿವರಿಸಿದಾಗ, ಹೇಳಿ ಸಂತಸದ ಉಸಿರು ಬಿಟ್ಟರು.

ಎರಡು ತಿಂಗಳಾಯಿತು :—

"ಭೀಮಯ್ಯ ಅಂತ ಹೆಸರಂತೆ. ಕುಸುಮನ ಜತೆಗೆ ಹೆಚ್ಚು ಕಡಿಮೆ ದಿನಾಗಲೂ ಮನೆಗೆ ಬರ್ತಾನೆ. ಶುದ್ಧ ಷೋಕಿ ಹುಡುಗರ ತರಹಾ ಯಾವಾಗಲೂ ಯಾವುದಾದರೂ ಹಾಡು ಸಲುಕ್ತಾ ಇರ್ತಾನೆ ಅವನ ಹುಬ್ಬುಗಳನ್ನು ನೋಡಿದರೆ ನನಗೇನೋ ಅನುಮಾನ ದಪ್ಪ ಕಂಬಳಿ ಹುಳು ಇದ್ದ ಹಾಗೆ ಇವೆ. ಅಂತಹವರು ಒಳ್ಳೆ ನಡತೆಗೆ ಹೆಸರು ತೊಗೊಂಡಿಲ್ಲ ಅಂದ್ರೆ ಅವನು ಯಾರು ಎತ್ತ ವಿಚಾರಿಸ ಬಾರದೆ ಅಂದ್ರೆ" ಅಂತ ಹೆಂಡತಿ ತಿರುಗಿ ಘನಪಾಟಿಗಳನ್ನು ತಿವಿಯುಕ್ಕೆ ಶುರು ಮಾಡಿದಳು

ಕಾಲೇಜಿಗೆ ಹೋಗಿ ವಿಚಾರಿಸಿಕೊಂಡು ಬಂದರು, ಘನಪಾಟಿಗಳು. ಪಿಟೀಲ್ ವಿದ್ವಾನ್ ರಾಮಯ್ಯನ ಮಗನಂತೆ ಕಣೆ ಅವನು. ಬಲು ಚೆನ್ನಾಗಿ ಹಾಡ್ತಾನಂತೆ. ಕುಸುಮಾ ಕಾಲೇಜಲ್ಲಿ ಸಂಗೀತ ಸ್ಪರ್ಧೆಗೆ ನಿಂತಿದ್ದಾಳಂತೆ. ಅವನಿಂದ ಕಲಿತು ಕೊಳ್ಳುತ್ತಾ ಇದ್ದಳಂತೆ ಸಂಗೀತದ ಜತೆಗೆ ಸಾಹಿತ್ಯವನ್ನೂ ಅರ್ಥಮಾಡಿಕೊಳ್ಳ ಬೇಕು. ನಿನ್ನ ಹಾಗೆ ಹಾಡಿದರೆ ಏನು ಪ್ರಯೋಜನ ಎಂದು ಎಲ್ಲರೆದುರಿಗೂ ಮೂದಲಿಸುತ್ತಾಳಂತೆ. ಆ ಕಡೆ ಏನೂ ಅಪಾಯವಿದ್ದ ಹಾಗಿಲ್ಲ ಎಂದು ಘನಪಾಟಿ ಗಳು ವರದಿ ಒಪ್ಪಿಸಿದರು.

ಹಾಡು ಹಾಡ್ತಾ ಕಣ್ಣು ಮಿಟುಕಿಸಿ, ಹುಬ್ಬು ಎತ್ತಿದ್ದನ್ನು ನೋಡಿ ಈ ತೋಳ ಎಲ್ಲಿ ಬಂತಪ್ಪಾ, ನಮ್ಮ ಹುಡುಗಿ ಪರಿಚಯ ಯಾಕೆ ಆಯ್ತಪ್ಪಾ ಎಂದು ಹೆದರಿಕೆ ಯಾಯ್ತು ಅಂದರೆ. ಅದಕ್ಕೇ ನಿಮ್ಮನ್ನು ಸತಾಯಿಸಬೇಕಾಯ್ತು. ಬೆಳೆದ ಮಗಳು. ಚಲನವಲನಗಳನ್ನು ನೋಡಿಕೊಂಡು ಹುಷಾರ್ ಕೊಡಬೇಡವೇನೇ ಅಂತ ನೀವು ಆ ಮೇಲೆ ಬೈದರೆ, ಅಂತ ನಿಮಗೆ ಹೇಳಿದೆ ಅಂದ್ರೆ ಅಂತ ಅಂದಳು ಹೆಂಡತಿ.

ಮೂರು ತಿಂಗಳಾಯಿತು :—

ಇಂಗ್ಲೆಂಡಿನಿಂದ ಘನಪಾಟಿಗಳಿಗೆ ಒಂದು ಕಾಗದ ಬಂತು. "ತಮ್ಮ ಟೀಕಾ ಸಹಿತ ಪ್ರಕಟಿತವಾದ ಈಶೋಪನಿಷತ್ತನ್ನು ಓದಿದೆ. ಬಹಳ ಸಂತೋಷವಾಯಿತು ತಮ್ಮಲ್ಲಿಯೇ ಮೂರು ತಿಂಗಳು ಗುರುಕುಲವಾಸ ಮಾಡಿ 'ಈಶ' ಕಲಿಯಬೇಕು ಅಂತ ಆಕಾಂಕ್ಷೆ. ತಾವು ಶಿಷ್ಯನನ್ನಾಗಿ ಸ್ವೀಕರಿಸುವುದಾದರೆ, ತಮ್ಮಿಂದ ಪತ್ರ ಬಂದ ಕೂಡಲೆ ನಿಮ್ಮಲ್ಲಿಗೆ ಬರುತ್ತೇನೆ" ಎಂದೊಬ್ಬರು ಬರೆದಿದ್ದರು, ಪೀಟರ್ಸ್ ಮಹಾಶಯರು.

ನನ್ನ ಯೋಗ್ಯತೆ ನಿಮಗೆಲ್ಲಾ ತಿಳಿಯದೆ ಇದ್ದರೂ ವಿದೇಶಗಳಲ್ಲಿ ಬುದ್ಧಿ ಇರು ವವರಲ್ಲಿ ನನ್ನ ಯಶಸ್ಸು ಹರಡಿದೆಯಲ್ಲಾ ಈಗಲಾದರೂ ಗೊತ್ತಾಯಿತೇನೆ ಅಂತ ಘನಪಾಟಿಗಳು ಹೆಂಡತಿ ಹೆದುರಿಗೆ ಕೊಚ್ಚಿಕೊಂಡರು.

ಇಂಗ್ಲೆಂಡಿನ ಬಂದ ಶಿಷ್ಯ ಯುವಕ. ಊರಿನ ಹೋಟೆಲಲ್ಲಿ ಉಳಿದುಕೊಂಡು ಬೆಳಗ್ಗೆ ಏಳು ಗಂಟೆಗೆ ಶುಚಿಯಾಗಿ ವಿದ್ಯಾಭ್ಯಾಸಕ್ಕೆ ಘನಪಾಟಿಗಳ ಮನೆಗೆ ಬರುತ್ತಿದ್ದ ಚಕ್ಕಳಮುಕ್ಕಳ ಹಾಕಿ ಕೂತು ಕಲಿತು ಹತ್ತು ಗಂಟೆಗೆ ಹಿಂತಿರುಗುತ್ತಿದ್ದ. ಬಗ್ಗಿಸಿದ ತಲೆಯನ್ನು ಎತ್ತಿದವನಲ್ಲ. ಅಷ್ಟು ವಿನಯವಂತ.

ಮೂರು ತಿಂಗಳು ಪಾಠ ಆದಮೇಲೆ ಗುರುದಕ್ಷಿಣೆ ಎಂದು ಶಾಲು ಧೋತ್ರ ಕೊಟ್ಟು ಗುರು, ಗುರುಪತ್ನಿಯರಿಗೆ ನಮಸ್ಕಾರ ಮಾಡಿ ಆಶೀರ್ವಾದ ಬೇಡಿದ.

ಒಳ್ಳೆ ಮನಸ್ಸಿನಿಂದ ಘನಪಾಟಿಗಳು ಅವರ ಹೆಂಡತಿ ಇಬ್ಬರೂ ಆಶೀರ್ವಾದ ಮಾಡಿದರು. ಅವನು ತಲೆ ಬಗ್ಗಿಸಿಕೊಂಡು ಕುರಿಯಂತೆ ಹೊರಟುಹೋದ. ಆ ಸಂಜೆಯೇ ರೈಲುಹತ್ತಿ ದಿಳ್ಳಿಗೆ ಹೋಗಿ ಅಲ್ಲಿಂದ ವಿಲಾಯಿತಿಗೆ ಹೋಗುವ ಏರ್ಪಾಡು.

ಆ ಸಂಜೆ ಕುಸುಮ ಕಾಲೇಜಿನಿಂದ ಮನೆಗೆ ರಾತ್ರಿ ಒಂಬತ್ತು ಆದರೂ ಬರ ಲಿಲ್ಲ. ಯಾವುದೋ ಸ್ಪರ್ಧೆಯೋ ನಾಟಕವೋ, ಇರಬೇಕು. ಎಂದರು ಘನಪಾ ಟಿಗಳು ಹತ್ತು ಗಂಟೆಯಾಯ್ತು ಹೋಗಿ ನೋಡಿಕೊಂಡು ಬನ್ನಿ ಎಂದರು ಹೆಂಡತಿ. ಘನಪಾಟಿಗಳು ಕಾಲೇಜಿನ ಹತ್ತಿರ ಹೋಗಿ ಅಲ್ಲಿ ಸ್ಮಶಾನದ ಕಳೆ ಇದ್ದುದನ್ನು ನೋಡಿಕೊಂಡು ಹಿಂತಿರುಗಿದರು. ಕಾಲೇಜಿನಲ್ಲಿ ಏನೂ ಇಲ್ಲವಲ್ಲೇ, ಯಾರೂ ಇತ್ತಿಲ್ಲವಲ್ಲೇ ಎಂದು ಅಳುಮುಖರಾದರು.

ರಾತ್ರಿ ಎರಡು ಮೂರು ಗಂಟೆಯಾಗಿರಬಹುದು. ತಂತಿ ಜವಾನ ಬಂದು. ಎಬ್ಬಿಸಿದ. ಘಟಪಾಟಿಗಳು ತಂತಿ ಇಸುಕೊಂಡು ನೋಡಿದರು. ಕುಸುಮಳ ತಂತಿ. ಇಂಗ್ಲೆಂಡಿಗೆ ಪೀಟರ್ಸ್ ಜತೆಗೆ ಹೊರಟಿರುವುದಾಗಿಯೂ, ಆತನನ್ನು ಇಂಗ್ಲೆಂಡಿನಲ್ಲಿ ಮದುವೆಯಾಗುವುದಾಗಿಯೂ ತಿಳಿಸಿದ್ದಳು. ಒಬ್ಬಳೇ ಮಗಳು ಅಂತ ನೀವು ಕಳಿಸುವುದಿಲ್ಲ ಅದಕ್ಕೇ ನಿಮಗೆ ಹೇಳಲಿಲ್ಲ ಎರಡು ಮೂರು ವರ್ಷ ಇಂಗ್ಲೆಂಡಿ ನಲ್ಲಿದ್ದು ತಿರುಗಿ ಇಬ್ಬರೂ ನಿಮ್ಮಲ್ಲಿಗೆ ಬರುತ್ತೇವೆ.

ಗುಳು ಗುಳು ಅಳುಕ್ಕೆ ಶುರು ಮಾಡಿದಳು ಹೆಂಡತಿ. ತೋಳ ಬಂತು, ತೋಳ ಬಂತು ಎಂದು ಅನುಮಾನ ಬಂದಾಗಲೆಲ್ಲ ಕೂಗಿಕೊಂಡೆ. ಎಲ್ಲಾ ಸುಳ್ಳಾಯಿತು. ದಿಟವಾಗಲೂ ತೋಳ ಬಂದು ನನ್ನ ಹುಡುಗಿ ಹಾರಿಸಿಕೊಂಡು ಹೋದಾಗ ತೆಪ್ಪಗೇ ಇದ್ದೆನಲ್ಲ ಅಂದ್ರೆ. ಇಷ್ಟೂ ತಿಳೀಲಿಲ್ಲವಲ್ಲ ಅಂತ ಹೇಳಿಕೊಂಡು ಅತ್ತಳು.

ವೀರಣ್ಣನ ಮ್ಯಾಕ್ಬೆತ್

His flight was madness
(Mac Act IV. Sc II)

ವೀರಣ್ಣ, ಆರತಿಯನ್ನು ಸ್ಕೂಟರಿನ ಮೇಲೆ ಸಾಗಿಸಿಕೊಂಡು ಬಂದುದನ್ನು ಆವಳ ತಂದೆಯೇ ನುಂಗಿಕೊಂಡರೂ, ಜನತೆ ಸಹಿಸಲಿಲ್ಲ. ಸಾರ್ವಜನಿಕ ದುರುಪವಾದ ಗೋಷ್ಠಿ ಊರಿನ ತುಂಬಾ ವದಂತಿಗಳನ್ನು ಹಬ್ಬಿಸಿತು 'ಕರ್ಣಪಿಶಾಚಿ' ವಿಶೇಷ ಪುರವಣಿಯೊಂದನ್ನು ಹೊರಡಿಸಿ, ವೀರಣ್ಣ ಮತ್ತು ಆರತಿಯರ ಬಗೆಗೆ ಸೂಚಕವಾಗಿ ಹಲವಾರು ಮಾತುಗಳನ್ನು ಬರೆಯಿತು. ನಾನೂ ಕೂಡಾ ಕೆಲವು ವದಂತಿಗಳನ್ನು ಹಬ್ಬಿಸಿದೆ.

ಇವುಗಳ ಫಲವಾಗಿಯೋ ಏನೋ ಕರ್ಬಿ, ನಮ್ಮ ಮನೆಯಂಗಳದಲ್ಲಿ ಪ್ರತ್ಯಕ್ಷನಾದ.

"ರಾಯಲೇ,"

"ಏನ್ಕರ್ಬಿ?"

"ಈರಣ್ಣನ್ನೇನಾರ ಕೊದ್ದಿಂದೇನಲೇ?"

"ನೋಟೀಸ್"

"ಕೊಟ್ಬೋರಿಗ್ಹೋಗನ, ಬರ್ತಿಯಾ?"

"ಯಾಕೋ?"

"ಅಲ್ಲಿ ಒಬ್ಬ ಏನೋರದರೇ, ಜಾತ್ಗ ಗೀತ್ಗ ಪಾಡಾಗಿ ನೋಡ್ತರಂತೆ."

"ಈರಗ್ಗೇನ್ಲೇ?"

"ಅಲಲಲ ಮುಖಕ್ತ್ರಂಗ್ಯಾರ್ತಿ!"

"ಏಳ್ಕೇಳಲೇ ತೆಪರ್ಗ. ಎಲ್ಲಾರ ಓಜ್ಕಂತಿದ್ದಾನು ಅದಕ್ಯಾಕೆ "

"ಅವನ್ರೂಮಿಗೆ ಹೋಗಿದ್ನೆಪಾ"

"ಬಾಗ್ಲಾ ಕಿತ್ತ್ರೋ ಇಲ್ಲೋ" ಮೇಷ್ಟ್ರು ಮನೆ ಗ್ಹೋಗಿದ್ದಾನು."

"ಅಲ್ಲಿಗೂ ಹೋಗಿಷ್ಟೆ ಕಣಲೇ. ಅವನ್ಮೇಷ್ಟ್ರು ಮಂಗ್ಯಾರ್ತಿಗೆ ಪಾಠ ಹೇಳ್ಕೊಡ್ತಿದ್ರು"

"ಶಹಬಾಸ್ ಭಾನ್ಸಲೇ ಕರ್ಬಿ ಅವರ್ದು!"

"ವೀರಣ್ಣ ಮನೆಗ್ಬಂದಿಲ್ರೀ ಮೇಷ್ಟ್ರೇ. ರೂಮಿನಾಗೂ ಇಲ್ಲ. ನಿಮ್ಹತ್ರೇನಾರ ಬಂದಿದ್ನೇ? ಅಂದೆ."

"ಅದ್ಕೇನಂದ್ರು?"

"ಅವ್ರೇನೇನೂ ಅನ್ಲಿಲ್ಲಾ ಆ ಮಂಗ್ಯಾರ್ಕೆ Pardon me ಅಂದ್ರು ನಾನಿದ್ದನು ತಾಯಿಾ ನೀನೇನ್ತಪ್ಪು ಮಾಡ್ಯದೀ ಅಂದೆ You are Veeranna's brother I Presume. can you arrange for the return of my spects and Sweater? ಅಂದ್ರು. ಎಲಾ ಪಿಟ... ಮಗನೇ ಹಿಂಗ್ಬಂತೇ ಅಂದ್ಕಂಡು ಬಂದೆ. ಆ ಮೇಷ್ಟ್ರು ಆ ಹುಡ್ಗಿ ಮುಸುಣೇನೇ ನೋಡ್ಕೆಂತ ಕುಂತಿದ್ರು."

ನಾನು ಜೋರಾಗಿ ಗಹಗಹಿಸಿದೆ.

"ಇದ್ರ ತಳಾ, ಬುಡಾ ಏನೇನೂ ಹರೀವಲ್ದು ನೋಡು" ಎಂದ ಕರ್ಬಿ.

"ಇದ್ನೊಬ್ಬೀರ್ಗ ಸಿದಬಸ್ಯಾಧ್ನಿಲ್ಲೋ" ಎಂದೆ.

"ಅಲ್ಲೋ ಯತ್ಲಗ್ಹೋಗಿದ್ದಾನು!" ಎಂದ ಕರ್ಬಿ.

"ಅವನ್ಸದ್ದಿ ಕಟ್ಗಂಡೇನ್ಮಾಡ್ತೀ. ಸಂತೇಗ್ಹೋಗಿ ಹುಳ್ಕಾಳು ಕೊತ್ತುಂಬ್ರೀ ಅಳ್ಸು" ಎಂದೆ ನಾನು.

ಕೆಲವು ದಿವಸಗಳ ನಂತರ, ಕರ್ಣ ಪಿಶಾಚಿಯು ಸಂಪಾದಕ ಮಹಾಶಯರು ಕೈಯನ್ನು ಸ್ಲಿಂಗಿನಲ್ಲಿ ಇಟ್ಟುಕೊಂಡು ಓಡಾಡುತ್ತಿದ್ದರು. ಅದೇ ದಿನ ಸಂಜೆ ಕರ್ಣ ಪಿಶಾಚಿಯಲ್ಲಿ ವೀರಣ್ಣ ಮತ್ತು ಆರತಿ ಇವರಿಬ್ಬರ ಮತ್ತು ಸಂಬಂಧಪಟ್ಟವರ ಕ್ಷಮೆಯನ್ನು ಕೋರಿದ್ದ ಸಂಪಾದಕೀಯ ಪ್ರಕಟವಾಯಿತು. ಎಂದಮೇಲೆ ವೀರಣ್ಣ ಊರಿಗೆ ಹಿಂತಿರುಗಿ ಬಂದಿರಬೇಕೆಂದು ಊಹಿಸಿಕೊಂಡೆ. ಸಕ್ಕರೆಯನ್ನು ತಂದು ಕೊಟ್ಟಾನು ಎಂಬ ಆಶೆ ಕ್ಷೀಣವಾಗಿ ಮನದಲ್ಲಿ ಮೂಡಿತು.

* * * *

ಆ ರಾತ್ರಿ (ಬಹುಶಃ ಆ ದಿನ ಜುಲೈ 28) ನಿದ್ರೆ ಮಾಡುತ್ತಿರುವಾಗ ಯಾರೋ ಕದ ತಟ್ಟಿದರು. ಮಳೆ ಬಾರದೆ ಸೀಮೆ ತಾರಿತ್ತು. ಮಳೆರಾಯನೇನಾದರೂ ನಮ್ಮ ಮನೆಗೆ ಬಂದನೇನೋ ಎಂದುಕೊಂಡು, ಸಂಭ್ರಮದಿಂದ ಎದ್ದು ಬಾಗಿಲು ತೆಗೆದೆ.

"ಏನ್ಮಾಡ್ಬುಕೂ ಅಂತ ಅದಿ. ಪುಸ್ತ್ಗ ಕೋಡೋ ಮಾರ್ಾಯ" ಎನ್ನುತ್ತಾ ವೀರಣ್ಣ ಕೋಣೆಗೆ ನುಗ್ಗಿದ.

" ಸಕ್ರೇ ತಂದೇನಪಾ. ಅಲಲಲೇ, ಇದೇನ್ರೋ ಲೇಡೀಸ್ ಸ್ವೆಟರ್ ಆರ್ಕ...."

" ಇಲ್ನೋಡೋ ಆ ಭೋ... ಮಕ್ಳು ದಿಮಾಕಾ ಮಾಡಿದ್ರು. ಥೇಟ್ರು ಕಿಡ್ಗಿ ಗಿಡ್ಗಿ ಪುಡೀ ಮಾಡಿ, ಬೋರ್ಡುರ್ ಗೀರ್ಡುರ್ ಕಿತ್ತು ನದೀ ಕಾಣ್ಸೆ ಬಂದ್ವು."

" ಯಾವ್ಥೇಟ್ರಲೇ?"

" ಯಾವ್ದೋ ಏನೋ ಯಾರ್ಗಬಲ್ರೋ. ಕಾಂಚಿ ತಲ್ವೈವನ್ ಅಂತೆ ಎಂಥಾರ ದರೇ? ಯೋಸು ತಿಮರು!"

" ಯಾವ್ರೂರ್ನಿಗೆ?"

" ಮ್ಯಾಕ್ಬೆತ್ ಕೊಡ್ತಿಯೋ ಏನಿಲ್ಲೋ?"

" ನಿಮಣ್ಣನ್ನ ಸ್ವೆಟರ್ ಕೇಳಿದ್ಹಂತೆ ಆರ್ಕ,"

" ಆ ಕರ್ಣ ಪಿಶಾಚಿ ಕೈ ಮುರ್ದೋತು ಗೊತ್ತಿಲ್ಲೇನೋ?

" ಮೇಷ್ಟ್ರು ಮಾತ್ನೇ ನಿಜಮಾಡಿ, ನನ್ಮರ್ಯಾದೆ ಕಳ್ದಿಲ್ರೋ. ಅವ್ರು ಟ್ಯೂಷನ್ ಹೇಳ್ತೀನಿ ಅಂದ್ರೂ ನೀನ್ಹೋಗ್ವಲ್ಲೇ."

" ನೀನದಿಯುಲ್ಲ, ಕಡಿಯುಬಡ್ಕೇನು?"

" ದುಬ್ಬೀರ್ರಾಗ, I have to work hard for my belly. ಅಲ್ಲದೇ, ನಿನ್ಗೆ ಹೈಸ್ಕೂಲ್ ಫಷ್ಟಿಯರ್ನಿಂದ ಈಗ ಆರಂಭ ಮಾಡಕ್ಕಾಗದಿಲ್ಲ. I would suggest one thing, ಆರ್ಕ ನಿಮ್ಮೇಷ್ಟ್ರುತ್ರ ಪಾಠಕ್ಕೆ ಹೋಗ್ತಾಳೆ. ಈ ಸ್ವೆಟರ್ ವಾಪಸ್ ಕೊಟ್ಟು ಅವ್ಳ ನೋಟ್ಸ್ ತಗಂಡ್ಬಂದು ಓದು."

" ನೀನು ಶುದ್ಧ ಅಯೋಗ್ಯ ಕಣಲೇ ರಾಯ."

" But, ನಾನೊಬ್ನೇ ನಿನ್ನ ಹಿತಚಿಂತಕ. moreover...."

" ಅದಿರ್ಲಪಾ ನೀನೇ ಹೇಳ್ಕೊಡು. ನಾನ್ಹೋದ್ಕೆಂತಿನಿ."

" ಹಂಗಾರೆ ಒಂದ್ಕೆಲ್ಸ ಮಾಡು. ಮ್ಯಾಕ್ಬೆತ್ ಓದ್ಕೆಂಡ್ಲಾ ಅದ್ರ ಕಥೆ ತಿಳ್ಕೊ. ಮುಂದಿಂದು ನಾನೋದ್ಕೆಂತಿನಿ."

" ಅಗ್ಲಿ ಪುಸ್ತಗ ಕೊಡು."

* * * *

ಆಗಸ್ಟ್ ಎರಡನೇ ತಾರೀಖಿನ ದಿನ ಮನೆಯಲ್ಲಿ ಕುಳಿತಿದ್ದೆ. ಹೊರಗಡೆ ಚಪ್ಪಲಿಯ ಸದ್ದಾಯಿತು. ಸ್ವಲ್ಪ ಹೊತ್ತಿನಿಂದ ಬೀದಿಯಲ್ಲಿ ಸದ್ದುಮಾಡುತ್ತಿದ್ದ ಕಾರು ಸ್ತಬ್ಧವಾಯಿತು ಅತ್ಯಂತ ಆಕರ್ಷಕವಾದ ಸುಗಂಧದ ಅಲೆಯೊಂದು ತೇಲಿಬಂತು.

“ ಸರ್ ” ಎಂದಿತು ಕೋಮಲ ಧ್ವನಿಯೊಂದು.

“ ದಯವಿಟ್ಟು ಒಳಕ್ಕೆ ಬನ್ನಿ ” ಎಂದೆ.

“ Prof. ಅಶೋಕ್ ನಿಮ್ಮ ವಿಷಯವನ್ನು ನನಗೆ ಹೇಳಿದ್ದರು. ”

” ಅವರ ಮಾತನ್ನು ನಂಬಬೇಡಿ” ಎಂದೆ ನಾನು. ಏಕೆಂದರೆ ಎಚ್ಚರಿಕೆ ಯಿಂದಿರುವುದೇ ಮೇಲು.

“ I am ಆರತಿ ”

“ ಬಹಳ ಸಂತೋಷ. ”

“ ನನಗೆ ಸ್ವೆಟರ್ ಬೇಕು It is a Presentation. my uncle ಬರ್‍ತಾರೆ I am badly in need of it. Please persuade ವೀರಣ್ಣ. ಅಂದ ಹಾಗೆ, ಅಶೋಕ್ ಹೇಳಿದ್ರು, ‘ Macbeth ’ ಬೇಕಂತೆ.”

“ Sorry, ವೀರಣ್ಣ ಒಯ್ದುಬಿಟ್ಟ. You are a bit late.”

“ ಚಿಂತೆಯಿಲ್ಲ ...”

“ And another thing, ನಿಮಗೆ ನೋಟ್ಸ್ ಕೊಡ್ತಾರಲ್ಲ, ಅದನ್ನ ನನ್ಗೆ ಕೊಡ್ತಾ ಬನ್ನಿ. ವೀರಣ್ಣನಿಂದ ಓದಿಸಿ ವಾಪಸ್ ಕೊಡ್ತೀನಿ.”

“ ಆಗಲಿ. Prof. ಅಶೋಕ್ is so kind. ತುಂಬಾ ಚೆನ್ನಾಗಿ ಪಾಠ ಹೇಳಿಕೊಡುತ್ತಾರೆ.”

“ ಓ ! ”

“ ವೀರಣ್ಣ ‘ ಮ್ಯಾಕ್‌ಬೆತ್ ’ ಕೊಡೋತನಕಾ, ಅಶೋಕ್ ಪಾಠ ಹೇಳಿ ಕೊಡೋ ಹಾಗಿಲ್ಲ. ನನ್ನ ಕಾಪಿ ಕಳೆದಿದೆ. ಅಂಗಡಿಯಲ್ಲಿ No stock.”

“ ಆಗಲಿ. ಪ್ರಯತ್ನ ಪಡ್ತೀನಿ. ಆದರೆ ನಿಮಗೆ ಹೇಗೆ ನನ್ನ ಮನೆ ಗೊತ್ತಾಯಿತು ? ”

ಆರತಿ ಅಪ್ರತಿಭಳಾದಳು. ಅವಳ ಮುಖ ಅಪೂರ್ವ ಸೌಂದರ್ಯದಿಂದ ಬೆಳಗಿತು. ಅವಳ ಮಂದಸ್ಮಿತ ಮನೋಹರವಾಗಿತ್ತು ಆದರೆ ಉತ್ತರ ಮಾತ್ರ ಬರಲಿಲ್ಲ. Thanks’ ಎಂದು ಹೇಳಿ ಹೊರಟುಹೋದಳು.

ಅವಳ ನಿರ್ಗಮನವಾದ ಸ್ವಲ್ಪ ಹೊತ್ತಿನಲ್ಲಿಯೇ Prof. ಅಶೋಕ್ ನನ್ನ ಕೋಣೆಗೆ ಕಾಲಿಟ್ಟರು

“ಅಡ್ಡಿದ್ದೆ ಬುದ್ಧೀ ಬರ್‍ರೀ, ಏನಪ್ಪಾ ಪ!” ಎಂದೆ.

“ ಏನೂ ಇಲ್ಲರೀ, ಒಂದ್ಪದ್ಯ ಬರೆದಿದ್ದೆ. ಹೇಗಿದೆ ಎಂದು ತೋರಿಸೋಣ ಅಂತ ಬಂದೆ” ಎಂದರು,

"ಆಗಲಿ ಸರ್, ಕೊಡೀ ನೋಡೋಣ" ಎಂದೆ

ನನಗೆ ಚಿಂತೆಯಾಯಿತು. ಕಾಲೇಜು ಮೇಷ್ಟರೆಲ್ಲ ಪದ್ಯ ಬರೆಯುವ ಕೆಟ್ಟ ಚಟವುಳ್ಳವರೆಂದು ನಾನೂ ಅವರೂ ನಿರ್ಧರಿಸಿದ್ದೆವು ಎಲಿಯಟ್, ದೊಣ್ಣೆ, ಹಾಪ್‌ಕಿನ್ಸ್, ಅಡಿಗರು ಕಾವ್ಯರಚನೆ ಮಾಡಿದ ಮೇಲೆ ಇನ್ನೇನಿದೆ ಬರೆಯಲು? ಎಂಬ ಪ್ರಶ್ನೆ ಅವರನ್ನು ಕಾಡಿಸುತ್ತಿತ್ತು. ಬರೆಯಬೇಕೆಂಬ ನಿಜವಾದ ಇಚ್ಛೆಯುಳ್ಳವರಿಗೆ ಭಗವತಿ ಸರಸ್ವತಿಯು ನಿಜವಾದ ಸ್ಫೂರ್ತಿ ಕೊಡುವಳೆಂದು ನಾನು ಸಮಾಧಾನ ಹೇಳಿದ್ದೆ. ಅವರೇ, ಈಗ ಈಪದ್ಯ ಬರೆದಿದ್ದರು.

ಲೋಕ ಅಸ್ತ ವ್ಯಸ್ತ
ನಾನ್ ತ್ರಸ್ತ
ಬಹು ಸುಸ್ತ
ಮಾರನೆನ್ನುವ ಬೆಸ್ತ
ಅವನ ಕಾಟವ. ವಿಸ್ತ
ರಿಸಿ ಹೇಳುವೆನೆ ಮಸ್ತ

"ಸ್ವಾಮಿ ಅರ್ಥವಾಯಿತು" ಎಂದೆ.

"ಇನ್ನೂ ಒಂದು ಸಾಲಿದೆ ಈ ಪದ್ಯದಲ್ಲಿ. ಇದೊಂದು ಹೊಸ ಛಂದಸ್ಸು. ಸಪ್ತಪದಿ ಎಂದು ಹೆಸರು. ಏಳನೇ ಸಾಲಿನ ಕೊನೆಗೆ ಸರಿಯಾದ ಪದ ಸಿಕ್ಕಲಿಲ್ಲ" ಎಂದರು.

"ನಾನು ಹೇಳಿಕೊಡುತ್ತೇನೆ ಬರೆಯಿರಿ.

ಬಿದ್ದೆ ಮೂರನೆ ಬೇಸ್ತ

ಸರಿಯಾಯಿತೋ ಇಲ್ಲವೋ. ಸ್ವಾಮಿ ನಡೀರಿ. ನಿಮಗೆ ಸಪ್ತಪದಿ ಆಗಲಿ" ಎಂದೆ.

* * * *

ಆಗಸ್ಟ್ 30 ರಂದು ವೀರಣ್ಣ ಬಂದ. ಕಥೆ ತನಗೆ ಗೊತ್ತಾಯಿತೆಂದೂ, ಆದರೆ ಕೆಲವೊಂದು ವಿಷಯಗಳಲ್ಲಿ ತನಗೆ ಅನುಮಾನವಿದೆಯೆಂದ ಹೇಳಿದ ತಾನು ಆರತಿಗೆ ಸ್ವೆಟರ್ ಹಿಂದಿರುಗಿ ಕೊಡಲಿಲ್ಲವೆಂದೂ, ಕನ್ನಡ ಚಳುವಳಿಯಲ್ಲಿ ತನಗೆ ಬಿಡುವೇ ಆಗಲಿಲ್ಲವೆಂದೂ ಹೇಳಿ 'ಇಂಪಾರ್ಟೆಂಟ್ ಹೇಳ್ಬಿಡಪಾ' ಎಂದ. ನಾನು ಕಥೆ ಹೇಳಲು ಕೇಳಿದೆ. ವೀರಣ್ಣನಿಗೆ ಕಷ್ಟಕ್ಕೆ ಬಂದಿತು.

"ಕ್ಲೈ ಟಿ ಮ್ನೆ ಸ್ಪಾ, ಲೇಡಿ ಮ್ಯಾಕ್‌ಬೆತ್ ಹೇಗಾದಳು!" ಎಂದ.

"ಯಾರು ಹೇಳಿದರು ಹಾಗೆಂದು ಎಂದೆ"

"ಮ್ಯಾಕ್‌ಬೆತ್‌ನ ಯಾಕೆ ಕೊಲ್ಬಿಕಾಲಿತ್ತು ಅವ್ವ ?"

" ಯಾರು ?" ಎಂದೆ.

" ಷೇಕ್ಸ್‌ಪಿಯರ್ !" ಎಂದ ವೀರಣ್ಣ.

" ಕೇಳನಂತೆ ತಡೀ " ಎಂದೆ.

" ಡಂಕನ್‌ನ ಕೊಂದ್ನಲ್ಲಪ್ಪಾ ಥೇನ್ ಆಫ್ ಕಾಡರ್. ಆಗ ಥೇನ್ ಆಫ್ ಗ್ಲಾಮಿಸ್, ಬ್ಯಾಂಕೋ, ಮಾಕ್ಡಫ್ ಇವ್ರೆಲ್ಲಾ ..."

" ಹೋಲ್ಡಾನ್ " ಎಂದೆ. " ತಮಾ ನಿಂಗಿವೆಲ್ಲಾ ಪಾಡಲ್ಲ. ಸುಮ್ನೆ ಆರ್ಕಿ ನೋಟ್ಸ್ನ ಇಸ್ಗಂಡೋದು. ಇನ್ನೂ ಪೊಯಟ್ರೀ ಐತೆ. ಪ್ರೋಸೈತೆ...."

" ಟ್ರಾಜೆಡಿ ಅಂದ್ರೇನಲೇ ರಾಯಾ ? ಹೀರೊ ಸತ್ರೆ ಟ್ರ್ಯಾಜೆಡಿ ಹೌದಲ್ಲೋ. ಈಗ ಗಂಗಾ-ಜಮುನಾ, ದೇವದಾಸ್ ಎಲ್ಲದ್ರಗೂ ಹೀರೋ ಸಾಯ್ತನೆ. ಅವುನ್ನ ಯಾಕೆ ಪರೀಕ್ಸೆಗಿಡ್ಲಿಲ್ಲ ?"

" ಯೋಳೀ ಮಂಗ್ನ....ಗನೇ, ಈಗಾದ್ರೂ ಹೋಗಿ ಸ್ಪೆಟರು, ಚಸ್ಮಾ ಕೊಟ್ಟು ನೋಟ್ಸ್ ತಗಂಬಾ. ಇಲ್ದಿದ್ರೆ ನಿಮ್ಮ ಮೇಷ್ಟ್ರನ್ನ ಕೇಳ್ಕೊಂಡೋಗು."

" ಮಾರ್ರಾಯಾ, ಮೇಷ್ಟ್ರ ಹತ್ರ ಹೋಗಕೇ ಹೆದ್ರಿಕೆ ಆಗ್ತತೆ. ಇಗಾ, ಸ್ಕೂಟರ್ ಮ್ಯಾಲೆ ಹೋಗಿ ಅವರ್ನ ನೀನ್ಕರ್ಕೊಂಡೆ ಅಂತ ಕರ್ಕಂಬರ್ತೀನಿ. ಇಲ್ಲೇ ಇರು. ಯೋಳೋ ಎಂಟೋ ಪ್ರಶ್ನೆ ಉತ್ರ ಬರಿಸ್ಕೊಡು. ಗಟ್ಟಿಮಾಡ್ತೀನಿ. ಅವೇ ಬಂದ್ರೆ ಪಾಸಾಗ್ಲಿ. ಇಲ್ದಿದ್ರೆ ಮುಂದಿನ ಮಾರ್ಚಿ ಐತಲಾ ? ನೀನೇ ಹೇಳ್ಬೇಕು ನೋಡು ಅವ್ರಿಗೆ. ನಂಗೆ ಕೇಳಕ್ಕೇ ಹೆದರ್ಕೆ ಆಗ್ತತೆ."

" ಆಗಲಯ್ಯಾ, ಆಗಲಿ " ಎಂದೆ. ಅವನಿಗೆ ಅಭಯುವಿತ್ತೆ.

* * * *

ಸಾಹಿತ್ಯ ಗೋಷ್ಠಿಯ ಅಧ್ಯಕ್ಷರು, ಇದು ವೇಗದ ಯುಗ, ಎಂದು ಅಪ್ಪಣೆ ಕೊಡಿಸಿದ್ದಾರೆ. ವೇಗದ ಯುಗವಾದುದರಿಂದ ಅವರು ವೇಗವಾಗಿ ಓದಿದರು ಎಂದೂ, ಕೇಳುವವರು ಅಲ್ಲಿಂದ ಇನ್ನೂ ವೇಗವಾಗಿ ಓಡಿದರು ಎಂದು ಹೇಳುತ್ತಿಲ್ಲ. ಆದರೆ ಅವರು ಹೇಳಿದುದು ಚರ್ವಿತ ಚರ್ವಣವೆಂದೂ, ಈಗ್ಯೆ ಐವತ್ತು ವರ್ಷಗಳ ಹಿಂದೆ ಹೇಳಿದ್ದರೆ ಅದು Original ಆಗುತ್ತಿತೆಂದೂ ಅನೇಕರು ಬಲ್ಲರು ಆದು ದರಿಂದ ನಾವು ಮುಂದಿನ ಕಥೆಯನ್ನು ಮಿಂಚಿನ ವೇಗದಿಂದ ಹೇಳಿ ಮುಗಿಸಿದರೆ ಅವರು ಇದು ತಮ್ಮ ಭಾಷಣದ ಪ್ರಭಾವವೆಂದು ಭಾವಿಸಬಾರದೆಂದು ನಮ್ಮ ನಮ್ರ ವಿನಂತಿ.

ವೀರಣ್ಣ ಮೇಷ್ಟರ ಬಳಿಗೆ ಹೋಗಿ ಅವರನ್ನು ಸ್ಕೂಟರಿನ ಮೇಲೆ ಕೂಡಿಸಿ ಕೊಂಡು ಐವತ್ತು ಮೈಲಿ ಸ್ಪೀಡಿನಲ್ಲಿ ನಮ್ಮ ಮನೆ ಕಡೆಗೆ ಬರುತ್ತಿದ್ದ. ದಾರಿಯಲ್ಲಿ

ಡ್ಯಾಡಿಯ ಕಾರು ನಲವತ್ತು ಮೈಲಿ ವೇಗದಿಂದ ಎದುರಾಗಿ ಬರುತ್ತಿತ್ತು. ಸ್ಕೂಟ ರನ್ನು ನೋಡಿ ಅದು ಗಕ್ಕನೆ ನಿಂತಿತು. ಆರತಿ ಕಾರಿನ ಹೊರಕ್ಕೆ ತಲೆಹಾಕಿ

"ಸ್ಪೆಕ್ಟ್ಸ ಪ್ಲೀಸ್" ಎಂದಳು.

"ಮಾರನೆನ್ನುವ ಬೆಸ್ತ

ಅವನ ಕಾಟವ ವಿಸ್ತ" ಎಂದರು Prof. ಅಶೋಕ್,

"ಸ್ಪೆಟರ್? ಎಂದರು ಡ್ಯಾಡಿ.

ವೀರಣ್ಣ ಬ್ರೇಕ್ ಒತ್ತಿದ. ಬ್ರೇಕ್ ತಂತಿ ಕಟ್ ಎಂದಿತು. ಸ್ಕೂಟರ್ ತತ್ತರಿಸಿ ರಸ್ತೆಯ ಪಕ್ಕದ ವಿದ್ಯುತ್ಕಂಬಕ್ಕೆ ಡಿಕ್ಕಿ ಹೊಡೆಯಿತು. ಆರತಿ " "Murder" ಎಂದು ಕೂಗುತ್ತಾ [Mac. Act IV Sc. II] ಲೇಡಿ ಮ್ಯಾಕ್ ಥಪ್ಪಳಂತೆ ಮೂರ್ಛೆಗೆ Exit ಆದಳು. ಪ್ರೊಫೆಸರ ತಲೆ ಒಡೆದಿತ್ತು.

ಪ್ರೊ. ಅಶೋಕರನ್ನು ಡ್ಯಾಡಿಯ ಕಾರಿನಲ್ಲೇ ಆಸ್ಪತ್ರೆಗೆ ಸಾಗಿಸಲಾಯಿತು. ಅವರ ತಲೆಗೆ ಸ್ವಲ್ಪ ಮಾತ್ರ ಪೆಟ್ಟು ಬಿದ್ದಿತು. ಅವರು ವೀರಣ್ಣನಿಗೆ ಎಂಟು ಇಂಪಾರ್ಟೆಂಟ್ ಪ್ರಶ್ನೆ ಹೇಳಿದರು. ಆರತಿಯ ನೋಟ್ಸನ್ನು ತಂದು ನನ್ನ ಉಸ್ತುವಾರಿಯಲ್ಲೇ ಕನ್ನಡದಲ್ಲಿ ಬರೆದುಕೊಂಡ ಉತ್ತರಗಳನ್ನು ಗಟ್ಟಿಮಾಡಿದ-ವೀರಣ್ಣ.

ಪರೀಕ್ಷೆ ಬಂತು—ಬರೆದು ಬಂದ.

ರಿಸಲ್ಟ್ ಬಂತು—ಪಾಸ್ ಆದ.

ಟೀ ಪಾರ್ಟಿಯಲ್ಲಿ ಕುಳಿತಾಗ "ಈರ್ಗಲೇ, ಸುಖಾಂತ್ಯವಾದ ಟ್ರ್ಯಾಜೆಡಿ ಯಾವ್ದೈತಲೇ" ಎಂದೆ.

ಮೇಷ್ಟರು, "ಈರಣ್ಣ ನೀನು ಪಾಸಾದ್ದು ಭಾಳ ಹೆಚ್ಚಿನದ್ದು" ಎಂದರು.

ನಾನು "ಹಾದರ್ಯ್ಯಾ ಈಗ್ಗಾ, ನಿಂಗೊತ್ತೇ

ಲೋಕ ಅಸ್ತ ವ್ಯಸ್ತ

ನಾನೇ ತ್ರಸ್ತ

ಬಹು ಸುಸ್ತ" ಎಂದೆ.

(ಮುಗಿಯಿತು)

—ಆ. ರಾ. ಸೇ.


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY.
FAS

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Printed by B. S. Iyengar, Bangalore-2

Publisher—B. N. Gupta. Editor—M. Sivaram.